ಸಂಪುಟ: 13 Volume ಸಂಚಿಕೆ: 269 Issue ಪುಟಗಳು 08 Pages ಶುಕ್ರವಾರ 12 ಡಿಸೆಂಬರ್ 2025 ₹6 PRGINO.120927 (RNINO: KARKAN/2011/48371) BDR/054/2026-2027 www.mallammanudi.in mallammanudi@gmail.com 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಬೆಳಗು ಸಮಾಜದಲ್ಲಿ ಎಲ್ಲರೊಟ್ಟಿಗೆ ಸಮಾನವಾಗಿ ಬಾಳಬೇಕಾದರೆ ಮೊದಲು ಸಮಾನತೆಯನ್ನು ಮೈಗೂಡಿಸಿಕೊಳ್ಳಬೇಕು. ಮೊದಲು ಇದಾಗದಿದ್ದರೆ ಸಮಾನತೆ ಬಯಸುವುದೇ ಮೂರ್ಖತನವಾಗುತ್ತದೆ. ಪ್ರಥಮವಾಗಿ ಪ್ರಾಥಮಿಕ ಸಮಸ್ಯೆ ಅರಿಯಬೇಕು.

–ಕಾರ್ಲ್‌ಮಾರ್ಕ್ಸ್

ಯಂತ್ರೋಪಕರಣ ಒದಗಿಸಲು ಅನುದಾನ 6
ಶಾಸಕ ಶರಣಗೌಡ ಆಕ್ರೋಶ 7
ಶಾಲಾ, ಕಾಲೇಜಿಗೆ ಅನುದಾನ ಶೀಘ್ರ 8

## ಪ್ರಜ್ವಲ್‌ಗೆ ಸುಪ್ರೀಮ್‌ನಲ್ಲೂ ಹಿನ್ನಡೆ

**ಬೆಂಗಳೂರು:** ಮನೆಗೆಲಸದ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜೀವಾವಧಿ ಜೈಲು ಶಿಕ್ಷೆ ಅನುಭವಿಸುತ್ತಿರುವ ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸುಪ್ರೀಂ ಕೋರ್ಟ್ ನಲ್ಲೂ ಭಾರಿ ಹಿನ್ನಡೆಯಾಗಿದೆ. ತಮ್ಮ ವಿರುದ್ಧದ ಎರಡು ಅತ್ಯಾಚಾರ ಪ್ರಕರಣಗಳ ವಿಚಾರಣೆಯನ್ನು ಬೇರೆ ಕೋರ್ಟ್ ಗೆ ವರ್ಗಾಯಿಸಲು ಕೋರಿ ಪ್ರಜ್ವಲ್ ರೇವಣ್ಣ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಗುರುವಾರ ವಜಾಗೊಳಿಸಿದೆ.

## ಸಮಾಜದ ಪ್ರಗತಿಗೆ ಮಠದ ಕೊಡುಗೆ



**ಬೆಳಗಾವಿ:** ವೀರಶೈವ ಲಿಂಗಾಯತ ಮಠಮಾನ್ಯಗಳು ಧಾರ್ಮಿಕ ಕ್ಷೇತ್ರಕ್ಕಷ್ಟೇ ಅಲ್ಲ, ರಾಜ್ಯದ ಆರೋಗ್ಯ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೂ ನೀಡಿರುವ ಕೊಡುಗೆ ಅಮೂಲ್ಯವಾದ್ದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ. ಬೆಳಗಾವಿಯಲ್ಲಿಂದು ವೀರಶೈವ ಲಿಂಗಾಯತ ವಿದ್ಯಾರ್ಥಿನಿಯರ ಉಚಿತ ವಸತಿ ನಿಲಯ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಮುದಾಯದ ಮಠಗಳು ಎಲ್ಲ, ಜಾತಿ, ಜನಾಂಗದವರಿಗೂ ಆಶ್ರಯ, ಅನ್ನ, ಅಕ್ಷರ (ಅರಿವು) ನೀಡಿ ರಾಜ್ಯದ ಪ್ರಗತಿಗೆ ಕೊಡುಗೆ ನೀಡುವೆ ಎಂದರು.

## ಬಹಿಷ್ಕಾರ ತಡೆ ಮಸೂದೆ ಮಂಡನೆ

**ಬೆಳಗಾವಿ:** ಸಭೆ–ಪಂಚಾಯ್ತಿ ಮೂಲಕ ಯಾವುದೇ ವ್ಯಕ್ತಿ, ಕುಟುಂಬ ಅಥವಾ ಕುಟುಂಬದ ಸದಸ್ಯರನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದನ್ನು ನಿಷೇಧಿಸುವ ಮತ್ತು ಅಪರಾಧೀಕರಿಸುವ ಮಸೂದೆಯನ್ನು ರಾಜ್ಯ ಸರ್ಕಾರ ಗುರುವಾರ ವಿಧಾನಸಭೆಯಲ್ಲಿ ಮಂಡಿಸಿದೆ. ಈ ಮಸೂದೆಯು ನಿಯಮಗಳನ್ನು ಉಲ್ಲಂಘಿಸಿ ಸಾಮಾಜಿಕ ಬಹಿಷ್ಕಾರ ಹಾಕುವವರಿಗೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 1 ಲಕ್ಷ ರೂ. ದಂಡ ವಿಧಿಸಲು ಅವಕಾಶ ನೀಡುತ್ತದೆ.ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರು ಇಂದು ವಿಧಾನಸಭೆಯಲ್ಲಿ 'ಕರ್ನಾಟಕ ಸಾಮಾಜಿಕ ಬಹಿಷ್ಕಾರ(ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಮಸೂದೆ, 2025' ಅನ್ನು ಮಂಡಿಸಿದ್ದು, ಅದರಲ್ಲಿ 20 ರೀತಿಯ ಸಾಮಾಜಿಕ ಬಹಿಷ್ಕಾರಗಳನ್ನು ಪಟ್ಟಿ ಮಾಡಿದ್ದಾರೆ.

## ತನಿಖೆಗೆ ಒಪ್ಪಿಕೊಂಡ ಉಪಾಧ್ಯಕ್ಷ

**ಬೆಳಗಾವಿ:** ವಿಧಾನ ಪರಿಷತ್ ಸಭಾಧ್ಯಕ್ಷ ಬಸವರಾಜ ಹೊರಟ್ಟಿ ಅವರ ವಿರುದ್ಧ ಕಾಂಗ್ರೆಸ್ ಶಾಸಕ ನಾಗರಾಜ್ ಯಾದವ್ ಅವರು ಮಾಡಿರುವ ಭ್ರಷ್ಟಾಚಾರ ಆರೋಪಗಳಿಗೆ ಪಕ್ಷಾತೀತವಾಗಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿಧಾನ ಪರಿಷತ್ ಸದಸ್ಯರು, ಸಭಾಧ್ಯಕ್ಷರ ವಿರುದ್ಧ ನೀಡಿರುವ ಆಕ್ಷೇಪಾರ್ಹ ಹೇಳಿಕೆಗಳ ಕುರಿತು ತನಿಖೆ ನಡೆಸಲು ಉಪಾಧ್ಯಕ್ಷ ಎಂ.ಕೆ. ಪ್ರಾಣೇಶ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲು ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ. ಚಳಿಗಾಲದ ಅಧಿವೇಶನ ಪ್ರಾರಂಭವಾಗುವ ಮುನ್ನ, ಪರಿಷತ್ ಸಚಿವಾಲಯದಲ್ಲಿ ಇತ್ತೀಚೆಗೆ 30 ಸಿಬ್ಬಂದಿಗಳ ನೇಮಕಾತಿಯಲ್ಲಿ ಭ್ರಷ್ಟಾಚಾರ ನಡೆದಿದ್ದು, ಇದರಲ್ಲಿ ಹೊರಟ್ಟಿ ಭಾಗಿಯಾಗಿದ್ದಾರೆ ಎಂದು ಕಾಂಗ್ರೆಸ್ ಸದಸ್ಯರು ಆರೋಪಿಸಿದ್ದರು.

## ಶರವಣ ಆರೋಪಕ್ಕೆ ಸಚಿವ ಉತ್ತರ

**ಬೆಳಗಾವಿ:** ಸಾರಿಗೆ ಇಲಾಖೆಯಲ್ಲಿ ಸಾರಿಗೆ ವಾಹನ ತಪಾಸಣೆಯ ಇನ್ಸ್‌ಪೆಕ್ಟರ್ ಹುದ್ದೆಗೆ ಬಡ್ತಿ ಪಡೆಯಲು 50 ಗ್ರೂಪ್ ಸಿ ಲಿಪಿಕ ಸಿಬ್ಬಂದಿ ತಾಂತ್ರಿಕ ಶಿಕ್ಷಣದ ನಕಲಿ ಸೇವಾನುಭವ ಪ್ರಮಾಣಪತ್ರ ನೀಡಿ, ಪಾಲಿಟೆಕ್ನಿಕ್ ಕಾಲೇಜ್‌ನಲ್ಲಿ ಓದುತ್ತಿರುವ ಆರೋಪವಿದೆ. ಈ ಬಗ್ಗೆ ಎಸ್‌ಐಟಿ ರಚಿಸಿ ತನಿಖೆ ನಡೆಸಬೇಕು ಎಂದು ವಿಧಾನ ಪರಿಷತ್ ಶಾಸಕ ಟಿ.ಎ.ಶರವಣ ಒತ್ತಾಯಿಸಿದ್ದಾರೆ.

ಸಾರಿಗೆ ಅಕ್ರಮದ ಕುರಿತು ಅವರು ಕೇಳಿದ ಚುಕ್ಕೆ ಗುರುತಿನ ಪ್ರಶ್ನೆಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಉತ್ತರ ನೀಡಿದ್ದು, ಸಾರಿಗೆ ಇಲಾಖೆಯ ಲಿಪಿಕ ಸಿಬ್ಬಂದಿ ಕಾನೂನು ಬಾಹಿರವಾಗಿ ನಕಲಿ ಸೇವಾನುಭವ ಪ್ರಮಾಣ ಪತ್ರ ಪಡೆದಿರುವುದು ಇನ್ನೂ



ತನಿಖೆಯ ಹಂತದಲ್ಲಿದೆ. ಶೀಘ್ರದಲ್ಲಿ ಋಜುವಾತಾದಲ್ಲಿ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

## ತೊಗರಿಗೆ ಮಿಡಿದ ಕೇಂದ್ರ: ಚಂದು

**ಕಲಬುರಗಿ:** ಕಲಬುರಗಿ ಸೇರಿದಂತೆ ಸಂಕಷ್ಟದಲ್ಲಿರುವ ನಾಡಿನ ತೊಗರಿ ಬೆಳೆಗಾರರ ಸಂಕಷ್ಟಕ್ಕೆ ಮಿಡಿದಿರುವ ಕೇಂದ್ರ ಸರ್ಕಾರ ಮಾದರಿ ಹೆಜ್ಜೆ ಇರಿಸಿದೆ ಎಂದು ಬಿಜೆಪಿ ಮಹಾನಗರ ಜಿಲ್ಲಾಧ್ಯಕ್ಷ ಚಂದ್ರಕಾಂತ (ಚಂದು) ಪಾಟೀಲ್ ತಿಳಿಸಿದ್ದಾರೆ.



ತೊಗರಿ ಬೆಳೆಗಾರರ ಸಮಸ್ಯೆಗಳನ್ನು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ಕೃಷಿ ಸಚಿವ ಶಿವರಾಜ್ ಸಿಂಗ ಚೌಹಾಣ ಅವರ ಗಮನಕ್ಕೆ ತಂದ ಕೂಡಲೇ ಬೆಂಬಲ ಬೆಲೆ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿ 9.67 ಲಕ್ಷ ಮೆಟ್ರಿಕ್ ಟನ್ ತೊಗರಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಒಪ್ಪಿಗೆ ನೀಡಲಾಗಿದೆ. ಇದರಿಂದಾಗಿ ರೈತರಿಗೆ ಭಾರಿ ಅನುಕೂಲ ಮಾಡಿಕೊಟ್ಟಂತೆ ಆಗಿದೆ ಎಂದು ಚಂದು ಪಾಟೀಲರು ತಿಳಿಸಿದ್ದಾರೆ. ಕೆಲ ದಿನಗಳ ಹಿಂದೆ ಭೀಮಾ ಮತ್ತು ಕೃಷ್ಣಾ ನದಿ ಪ್ರವಾಹದಿಂದ ಕಲಬುರಗಿ, ಬೆಳಗಾವಿ, ವಿಜಯಪುರ ಬೀದರ, ಯಾದಗಿರಿ ಸೇರಿದಂತೆ ಹಲವು ಜಿಲ್ಲೆಗಳು ಪ್ರವಾಹ ಮತ್ತು ಅತಿವೃಷ್ಟಿಯಿಂದ ತತ್ತರಿಸಿ ಅಪಾರ ಪ್ರಮಾಣದ ಬೆಳೆ ಹಾನಿ ಆಗಿತ್ತು. ಆಗ ರಾಜ್ಯ ಸರ್ಕಾರದ ರೈತರ ಕಣ್ಣೀರು ಒರೆದಂತೆ ಮಾಡಿತೆ ವಿನಹಃ ಕಾಂಗ್ರೆಸ್ ಸರ್ಕಾರ ಆಗ ಕೊಟ್ಟ ಮಾತು ಮರೆಯಿತು. ಪರಿಹಾರವನ್ನು ಸರಿಯಾಗಿ ಕೊಡಲಿಲ್ಲ ಎಂದು ವಿವರಿಸಿದ್ದಾರೆ.

# ನಿಲ್ಲದ ಪಟ್ಟದಾಟ ಫೈಟ್

### 5 ವರ್ಷ ಸಿದ್ಧರಾಮಯ್ಯನವರೇ ಮುಖ್ಯಮಂತ್ರಿ: ಯತೀಂದ್ರ, ಒಳ್ಳೆಯದಾಗಲಿ: ಡಿಕೆಶಿ

• ಮಲ್ಲಮ್ಮ ನುಡಿ ಬೆಳಗಾವಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನಡುವಿನ ನಾಯಕತ್ವ ಬದಲಾವಣೆ ಕುರಿತ ಚರ್ಚೆ ದಿನದಿಂದ ದಿನಕ್ಕೊಂದು ತಿರುವು ಪಡೆಯುತ್ತಿದೆ. ಮುಖ್ಯಮಂತ್ರಿಯ ಪುತ್ರ ಯತೀಂದ್ರ ಇಂದು ಕೂಡ ನಮ್ಮಪ್ಪನೇ ಐದುವರ್ಷ ಮುಖ್ಯಮಂತ್ರಿ ಎಂದಿರುವುದು ಡಿಕೆಶಿವಕುಮಾರ್ ಹಾಗೂ ಅವರ ಬಣಕ್ಕೂ ಬಿಸಿ ಹುಯ್ದಂತಾಗಿದೆ. ಮುಖ್ಯಮಂತ್ರಿ ಪುತ್ರನಿಗೆ ದಂಡಿಸಲಾಗದೆ ಧರ್ಮಸಂಕಟದಲ್ಲಿದ್ದರೆ, ಡಿಕೆಶಿ ಮಾತ್ರ ಮತ್ತಷ್ಟು ಕ್ರುದ್ಧರಾಗುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

**ಹೈಕಮಾಂಡ್‌ಗೆ ಏನಾಗಿದೆ..?:** ಹೇಳಿಕೆ ಪ್ರತಿ ಹೇಳಿಕೆಗಳನ್ನು ಕಂಟ್ರೋಲ್ ಮಾಡಬೇಕಾದ ಕಾಂಗ್ರೆಸ್ ಹೈಕಮಾಂಡ್ ಮೌನಕ್ಕೆ ಶರಣರಾಗಿರುವುದೇ ಕಾಂಗ್ರೆಸ್ ಪಾಳೆಯದಲ್ಲಿ ನುಂಗಲಾರದ ಬಿಸಿತುಪ್ಪವಾಗಿ ಪರಿಣಮಿಸಿದೆ.

**ಪರ ವಿರೋಧ ವಾದ:** ಡಿಕೆಶಿವಕುಮಾರ್ ಬಣವು ಸಿದ್ದರಾಮಯ್ಯಗೆ ಎದುರಾಡದೆ, ಡಿಕೆಶಿ ಅವರ ಒಲುಮೆಯಿಂದೀಚೆಗೆ ಬರಲಾರದ ಒದ್ದಾಡುತ್ತಿದ್ದರೆ, ಸಿದ್ರಾಮಯ್ಯ ಪುತ್ರನ ವಿರುದ್ಧ ಯಾರೂ ತುಟಿಪಿಟಿಕ್ ಎನ್ನುತ್ತಿಲ್ಲ. ಡಿಕೆಶಿ ಬಣ–ಸಿಎಂ ಬಣದ ಮಾತ್ರ ಪರವಿರೋಧ ವಾದ ಮುಂದುವರಿದಿದೆ.







### ನಿಲ್ಲದ ಭೋಜನ ಕೂಟಗಳು..!

ಬೆಂಗಳೂರಿನಲ್ಲಿ ಅಧಿಕಾರ ಹಂಚಿಕೆಯ ಜಟಾಪಟಿ ನಡೆಯುತ್ತಿರುವಾಗ ಸಿಎಂ ಆಪ್ತ ಬಳಗದಲ್ಲಿರುವ ಕೆಲ ಸಚಿವರು ಆಪ್ತ ಕೂಟ ಏರ್ಪಡಿಸಿದ್ದರೆ, ಡಿ.ಕೆ. ಶಿವಕುಮಾರ್ ಕೆಲ ಸಚಿವರನ್ನು ಭೇಟಿ ಮಾಡಿದ್ದರು. ಈ ಭೋಜನ ಕೂಟಗಳು ಬೆಳಗಾವಿ ಅಧಿವೇಶನಕ್ಕೂ ವಿಸ್ತರಿಸಿದೆ. ಶಾಸಕ ಫಿರೋಜ್ ಸೇಠ್ ಮನೆಯಲ್ಲಿ ಔತಣಕೂಟ ನಡೆಸಿದ್ದು, ಸಿದ್ದರಾಮಯ್ಯ, ಸಚಿವ ಜಮೀರ್ ಅಹಮದ್ ಖಾನ್, ಬೈರತಿ ಸುರೇಶ್, ಯು.ಟಿ. ಖಾದರ್, ಸಲೀಂ ಅಹಮದ್ ಭಾಗಿಯಾಗಿದ್ದರು. ಏತನ್ಮಧ್ಯೆ ಸತೀಶ್‌ಜಾರಕಿಹೊಳಿ ಅವರ ಆಪ್ತ ವಲಯದಲ್ಲೂ ಔತಣ ಕೂಟ ನಡೆದಿರುವುದು ಕುತೂಹಲ ಕೆರಳಿಸಿದೆ.

### ಚಮತ್ಕಾರದ ಚರ್ಚೆ

ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ವಿಶಿಷ್ಟಪದ ಬಳಸಿ ವಿವಾದ ಸೃಷ್ಟಿಸಿದ್ದಾರೆ. ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರರ ಹೇಳಿಕೆಗೆ ಪ್ರತಿಕ್ರಿಯಿಸಿ, ನಾವು ಮಾತನಾಡಿದರೆ ಬಲತ್ಕಾರ, ಅವರು ಮಾತನಾಡಿದರೆ ಚಮತ್ಕಾರ. ನಾವು ಏನಾದರೂ ಮಾತನಾಡಿದರೆ ನೋಟಿಸ್ ಕೊಡುತ್ತಾರೆ. ನಮ್ಮ ವರಿಷ್ಠರು ಅಷ್ಟು ವೀಕ್ ಇಲ್ಲ, ಬಲಿಷ್ಠ ಎಂದಿದ್ದಾರೆ.

### ಸಿಎಂ ಉತ್ತರಿಸುತ್ತಾರೆ

ಬೆಳಗಾವಿಗೆ ತೆರಳುವ ಮುನ್ನ ಬೆಂಗಳೂರಿನಲ್ಲಿ ಮಾತನಾಡಿದ ಡಿಕೆ ಶಿವಕುಮಾರ್, ಬಹಳ ಸಂತೋಷ, ಒಳ್ಳೆಯದಾಗಲಿ, ರಾಜ್ಯಕ್ಕೆ ಒಳ್ಳೆಯದಾಗಲಿ. ನಾಯಕತ್ವ ವಿಚಾರವಾಗಿ ವಿಧಾನ ಪರಿಷತ್ತು ಸದಸ್ಯ ಯತೀಂದ್ರ, ಸಿದ್ದರಾಮಯ್ಯ ನೀಡಿರುವ ಹೇಳಿಕೆ ಬಗ್ಗೆ ಸಿಎಂ ಸಿದ್ದರಾಮಯ್ಯ ಉತ್ತರ ನೀಡುತ್ತಾರೆ ಎಂದಷ್ಟೇ ಹೇಳಿದ್ದಾರೆ.

### ಬದಲಾವಣೆಗೆ ಒಪ್ಪಿಲ್ಲ

ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯತೀಂದ್ರ ಸಿದ್ದರಾಮಯ್ಯ, ಮುಖ್ಯಮಂತ್ರಿ ಬದಲಾವಣೆಗೆ ಹೈಕಮಾಂಡ್ ಒಪ್ಪಿಲ್ಲ ಎಂದು ಹೇಳಿದ್ದಾರೆ. ಇವರ ಈ ಹೇಳಿಕೆ ಕಾಂಗ್ರೆಸ್ನ ಹಲವು ಶಾಸಕರ ಅದರಲ್ಲೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜತೆ ಗುರುತಿಸಿಕೊಂಡಿರುವ ಶಾಸಕರ ಕೆಂಗಣ್ಣಿಗೆ ಕಾರಣವಾಗಿದೆ.

### ಸಚಿವ ಭೈರತಿ ಟಾಂಗ್

ಉ. ಕರ್ನಾಟಕದ ಸಮಸ್ಯೆಗಳ ಕುರಿತು ಚರ್ಚೆ ವೇಳೆ ಸಿಎಂ ಕುರ್ಚಿ ಬಗ್ಗೆ ಮಾತಾಡಿದ ಅಶೋಕ್, ಬೈರತಿ ಸುರೇಶ್ ಕೂಡ ಕಿಂಗ್ ಅಲೈವ್ ಅಂತಾರೆ ಎಂದಾಗ ಕೆರಳಿದ ಸಚಿವ ಬೈರತಿ , ಹೌದು, ನಾನು ಕಿಂಗ್ ಈಸ್ ಅಲೈವ್ ಅಂತ ಹೇಳಿದ್ದೆ. ನಿಮ್ಮ ಅಧ್ಯಕ್ಷರನ್ನೇ ಚೇಂಜ್ ಮಾಡ್ತೇವೆ ಅಂತಿದ್ದೀರಲ್ಲ, ಮೊದಲು ನಿಮ್ಮದನ್ನ ಸರಿಮಾಡಿ ಎಂದು ಗುಡುಗಿದ್ದಾರೆ.

## ಮಕ್ಕಳ ಊಟದಲ್ಲಿ ಹುಳುಗಳು..!

**ಕೊಪ್ಪಳ:** ಜಿಲ್ಲೆಯ ಕೆಲವು ಭಾಗಗಳ ಸರ್ಕಾರಿ ಶಾಲೆಗಳಲ್ಲಿ ಆಹಾರ ಧಾನ್ಯಗಳಲ್ಲಿ ಹುಳಗಳು ತುಂಬಿದ್ದು ಆತಂಕಕ್ಕೆ ಕಾರಣವಾಗಿದೆ. ಶಾಲಾ ಮಕ್ಕಳ ಮಧ್ಯಾಹ್ನದ ಊಟದಲ್ಲೂ ಪತ್ತೆಯಾಗಿರುವುದು ಪೋಷಕರಲ್ಲಿ ಗಾಬರಿಪುಟ್ಟಿಸಿದೆ. ಕೊಪ್ಪಳ ತಾಲ್ಲೂಕಿನ ಬಿಸರಳ್ಳಿ ಗ್ರಾಮದ ಶಾಲೆಯೊಂದರಲ್ಲಿ ಅನ್ನದಲ್ಲಿ ಹುಳಗಳು ಕಂಡುಬಂದಿವೆ. ಕುಷ್ಟಗಿ ತಾಲೂಕಿನ ಮುದ್ದೇನಹಳ್ಳಿಯ ಶಾಲೆಯೊಂದರಲ್ಲಿ ಇದೇ ರೀತಿಯ ಸಮಸ್ಯೆ ಎದುರಾಗಿದ್ದು, ಮಕ್ಕಳ ಆರೋಗ್ಯಕ್ಕೆ ಗಂಭೀರ ಅಪಾಯವನ್ನುಂಟುಮಾಡುತ್ತಿದೆ.



ಉನ್ನತ ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಧಿಕಾರಿಗಳೇ ಅಲವತ್ತುಕೊಳ್ಳುತ್ತಾರೆ.

ಕೊಪ್ಪಳ ಜಿಲ್ಲೆಯಲ್ಲಿ ಪ್ರತಿದಿನ 2.8 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸಲಾಗುತ್ತಿದೆ. ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ತಯಾರಿಸಲಾಗುವ ಮಧ್ಯಾಹ್ನದ ಊಟವನ್ನು ಅಧಿಕಾರಿಗಳು ಪರಿಶೀಲಿಸಬೇಕೆಂದು ಮಕ್ಕಳ ಪೋಷಕರು ಒತ್ತಾಯಿಸಿದ್ದಾರೆ.

## ಕ್ರೀಡಾಪಟುಗಳಿಗೂ ಮೀಸಲು

**ಬೆಳಗಾವಿ:** ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಅರಣ್ಯ, ಪೊಲೀಸ್ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಮೀಸಲಾತಿ ಜಾರಿಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಪರಿಷತ್ತಿನಲ್ಲಿ ಘೋಷಿಸಿದ್ದಾರೆ.



ಪರಿಷತ್ ಸದಸ್ಯ ಐವನ್ ಡಿಸೋಜ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಲು ಅರಣ್ಯ ಇಲಾಖೆಯಲ್ಲಿ ಶೇ 3, ಪೊಲೀಸ್ ಇಲಾಖೆಯಲ್ಲಿ ಶೇ. 3 ಮತ್ತಿತರ ವಿವಿಧ ಇಲಾಖೆಗಳಲ್ಲಿ ಶೇ. 2 ರಷ್ಟು ಮೀಸಲು ಜಾರಿಗೊಳಿಸುವುದಾಗಿ ತಿಳಿಸಿದ್ದರು. ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಕಾಮನ್ವೆಲ್ತ್ ಮತ್ತು ಏಷ್ಯನ್ ಗೇಮ್ಸ್‌ನಲ್ಲಿ ಪದಕ ಗೆದ್ದ 13 ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರ ನೇಮಕಾತಿ ನೀಡಿದೆ ಎಂದಿದ್ದಾರೆ.

## 20.17 ಲಕ್ಷ ಜನರಿಗೆ ಮನೆ ಇಲ್ಲ..!

• ಮಲ್ಲಮ್ಮ ನುಡಿ ಬೆಂಗಳೂರು

ಕೇಂದ್ರದ ಮಾರ್ಗಸೂಚಿಗಳ ಪ್ರಕಾರ ರಾಜ್ಯದಲ್ಲಿ 20.17 ಲಕ್ಷ ಮನೆ ರಹಿತರು ಮತ್ತು 17.31 ಲಕ್ಷ ನಿವೇಶನ ರಹಿತರು ಸೇರಿ ಒಟ್ಟು 37,48,700 ವಸತಿ ರಹಿತರು ಇದ್ದಾರೆ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.



ವಿಧಾನ ಪರಿಷತ್‌ನಲ್ಲಿ ಸದಸ್ಯ ಶಿವಕುಮಾರ್ ಕೆ. ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಚಿವ, ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮಂಜೂರಾದ 3,12,040 ವಸತಿಗಳಲ್ಲಿ ಶೇ.83 (2,60,799) ಮನೆಗಳ ಕಾಮಗಾರಿ ಇನ್ನೂ ಆರಂಭಗೊಂಡಿಲ್ಲ. 2024–25ನೇ ಸಾಲಿಗೆ ವಿವಿಧ ಯೋಜನೆಗಳಡಿ 7,38,881 ಮನೆಗಳ ಗುರಿ ನೀಡಿದ್ದು, 3,27,747ಕ್ಕೆ ಅನುಮೋದನೆ ದೊರೆತಿದೆ. ಆದರೆ, ಈ ಪೈಕಿ ಕೇವಲ 9,839 ಮನೆಗಳು ಪೂರ್ಣಗೊಂಡಿವೆ. 2,70,977 ಮನೆಗಳ ಕಾಮಗಾರಿ ಆರಂಭಗೊಂಡಿಲ್ಲ ಎಂದು ವಿವರಿಸಿದ್ದಾರೆ.

ವಸತಿ ನಿರ್ಮಾಣಕ್ಕೆ ನೀಡುವ ಅನುದಾನವನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ 4 ಲಕ್ಷ ರೂ.ಗೆ ಮತ್ತು ಸಾಮಾನ್ಯವರ್ಗದವರಿಗೆ 3.5 ಲಕ್ಷ ರೂ.ಗೆ ಹೆಚ್ಚಿಸುವ ಬಗ್ಗೆ ಸರ್ಕಾರ ಚಿಂತಿಸುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

## ದ್ವೇಷದ ರಾಜಕಾರಣ ಬೇಡ

• ಮಲ್ಲಮ್ಮ ನುಡಿ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸರಕಾರ ಜನೌಷಧಿ ಕೇಂದ್ರಗಳನ್ನು ಸ್ಥಗಿತಗೊಳಿಸಿ ನೀಡಿದ ಆದೇಶವನ್ನು ರಾಜ್ಯದ ಹೈಕೋರ್ಟ್ ರದ್ದು ಮಾಡಿದೆ. ಜನೌಷಧಿ ಕೇಂದ್ರಗಳನ್ನು ಮತ್ತೆ ತೆರೆಯಲು ಸೂಚಿಸಿರುವುದನ್ನು ಸ್ವಾಗತಿಸುವುದಾಗಿ



ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ತಿಳಿಸಿದ್ದಾರೆ. ಅವರು ಇಂದು ಇಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದರು. ರಾಜ್ಯದ ಮುಖ್ಯಮಂತ್ರಿಗಳು ಇನ್ನಾದರೂ ದ್ವೇಷದ ರಾಜಕಾರಣವನ್ನು ಬದಿಗಿಡಬೇಕು ಎಂದು ಆಗ್ರಹಿಸಿದ್ದಾರೆ. ಕೇಂದ್ರ ಸರಕಾರದ ಜೊತೆ ಸೌಹಾರ್ದಯುತವಾಗಿ ನಡೆದುಕೊಳ್ಳಬೇಕು. ಇದರಿಂದ ರಾಜ್ಯಕ್ಕೆ ಮತ್ತು ಬಡವರಿಗೆ ಒಳ್ಳೆಯದಾಗುತ್ತದೆ. ಇರುವಷ್ಟು ದಿನ ಉತ್ತಮ ಹೆಜ್ಜೆ ಇಡಲಿ ಎಂದು ಅವರು ವಿನಂತಿಸಿದರು. ಜನೌಷಧಿ ಕೇಂದ್ರಗಳು ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಒಂದು ಕಾರ್ಯಕ್ರಮ, ಒಂದು ಕೊಡುಗೆ. ಈ ರಾಜ್ಯದ, ದೇಶದ ಬಡಜನರಿಗೆ ಕೈಗೆಟಕುವ ದರದಲ್ಲಿ ಔಷಧಿಗಳು ಸಿಗಬೇಕು; ಇದರಿಂದ ಬಡವರಿಗೆ ಅನುಕೂಲ ಆಗಬೇಕೆಂಬ ಸದುದ್ದೇಶದಿಂದ ಆ ಕಾರ್ಯಕ್ರಮ ಜಾರಿಗೊಳಿಸಿದ್ದರು ಎಂದು ವಿವರಿಸಿದ್ದಾರೆ.

ಸ್ವಾತಂತ್ರ್ಯಾನಂತರದಲ್ಲಿ ಪ್ರಥಮ ಬಾರಿಗೆ ಸತತವಾಗಿ 3ನೇ ಬಾರಿಗೆ ಪ್ರಧಾನಿಯಾಗಿ ಅವರು ಸೇವೆ ಸಲ್ಲಿಸುತ್ತಿದ್ದಾರೆ. ಅವರು ಕೊಟ್ಟಿರುವ ಬಡವರ ಯೋಜನೆಗೆ ಕಲ್ಲು ಹಾಕುವ ಷಡ್ಯಂತ್ರ, ಹುನ್ನಾರ ಸಿದ್ದರಾಮಯ್ಯನವರ ಸರಕಾರದ್ದಾಗಿತ್ತು ಎಂದು ಟೀಕಿಸಿದ್ದಾರೆ.

## ಮೇಕೆದಾಟು, ನಾಯಕತ್ವ..ಇತ್ಯಾದಿ

• ಮಲ್ಲಮ್ಮ ನುಡಿ ಬೆಳಗಾವಿ

**ಬೆಳಗಾವಿ ಕಲಾಪದಲ್ಲಿ ಕಂಡದ್ದು**

ವಿಧಾನಸಭೆಯಲ್ಲಿ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಗಂಭೀರ ಚರ್ಚೆ ನಡೆದಿದೆ. ಈ ವೇಳೆ ಸುನೀಲ್ ಕುಮಾರ್ ಅವರು ನಾಯಕತ್ವ ಬದಲಾವಣೆ ವಿಚಾರವನ್ನು ಪರೋಕ್ಷವಾಗಿ ಪಸ್ತಾಪಿಸಿ ಕಾಲೆಳೆದಿದ್ದಾರೆ.

ಉತ್ತರಕರ್ನಾಟಕಭಾಗದಚರ್ಚೆಯಸಂದರ್ಭದಲ್ಲಿ ಮೇಕೆದಾಟು ಯೋಜನೆ ಬಗ್ಗೆ ಸರ್ಕಾರದ ಮೌನದ ಕುರಿತಾಗಿ ವಿಪಕ್ಷ ಉಪನಾಯಕ ಅವವಿಂದ ಬೆಲ್ಲದ ಪ್ರಸ್ತಾಪಿಸಿ, ತಮಿಳುನಾಡು ಡಿಎಂಕೆ ಮೈತ್ರಿ ಕಾರಣಕ್ಕಾಗಿ ಮೇಕೆದಾಟು ಕೆಲಸ ಆರಂಭವಾಗಿಲ್ಲವೇ? ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ಡಿಕೆ ಶಿವಕುಮಾರ್ ಮಧ್ಯಪ್ರವೇಶಿಸಿ, ನೀವು ಸಿಎಂ ಆಗಬೇಕು ಎಂದುಕೊಂಡವರು. ವಿಪಕ್ಷದ ನಾಯಕರು ಆಗಬೇಕು ಎಂದಿದ್ದವರು. ನಿಮಗೆ ಅನುಭವ ಇದೆ. ಮೊನ್ನೆ ತಾನೆ ನ್ಯಾಯಾಲಯದ ಆದೇಶ ಆಗಿದೆ. ಸಿಡಬ್ಲ್ಯುಸಿಗೆ ಆರು ತಿಂಗಳ ಸಮಯಾವಕಾಶ ನೀಡಲಾಗಿದೆ. ಯೋಜನೆಗೆ ಅನುಮತಿ ನೀಡುವಲ್ಲಿ ಕೇಂದ್ರ ಸರ್ಕಾರ ತೀರ್ಮಾನ ಮಾಡಬೇಕು ಎಂದು ಸುಪ್ರೀಂಕೋರ್ಟ್ ಸೂಚಿಸಿದೆ ಎಂದು ವಿವರಿಸಿದ್ದಾರೆ. ಈ ವೇಳೆ ಸುನೀಲ್ ಕುಮಾರ್ ಮಧ್ಯ ಪ್ರವೇಶ ಮಾಡಿ, ಇಷ್ಟು ನಯ ವಿನಯ ಎಲ್ಲಿಂದ ಬಂತು ಸರ್ ನಿಮಗೆ. ಇದೇ ಡಿಕೆ ಶಿವಕುಮಾರಾ? ಹೊಸ ಶಿವಕುಮಾರಾ? ಡಿಕೆ ಶಿವಕುಮಾರ್ ಎಂಬುವುದಕ್ಕೆ ಒಂದು ಕಲ್ಪನೆ ಇದೆ.

### ಉ.ಕ ಶಾಸಕರಿಗೆ ಭಿಕ್ಷುಕರು ಥರ ಭಿಕ್ಷೆ

ಉತ್ತರ ಕರ್ನಾಟಕದ ಶಾಸಕರು ಬೆಂಗಳೂರಿಗೆ ಬಂದು ಭಿಕ್ಷುಕರ ತರ ಭಿಕ್ಷೆ ಬೇಡಬೇಕು. ಕೊನೆಗೆ ಹತ್ತು, ಇಪ್ಪತ್ತು ಪೈಸೆ ಸಿಗುತ್ತದೆ ಎಂದು ಆಡಳಿತ ಪಕ್ಷದ ಶಾಸಕ ರಾಜು ಕಾಗೆ ವಾಸ್ತವ ಬಿಚ್ಚಿಟ್ಟರು. ವಿಧಾನಸಭೆಯಲ್ಲಿ ಉತ್ತರ ಕರ್ನಾಟಕದ ಬಗ್ಗೆ ನಡೆದ ಚರ್ಚೆಯಲ್ಲಿ ಆ ಭಾಗದ ಶಾಸಕರ ಕಷ್ಟವನ್ನು ಕಾಂಗ್ರೆಸ್ ಶಾಸಕ ರಾಜು ಕಾಗೆ ತೋಡಿಕೊಂಡರು. ಉತ್ತರ ಕರ್ನಾಟಕ ಸಮಸ್ಯೆಗಳ ಬಗ್ಗೆ ತೆರೆದಿಟ್ಟಿದ್ದಾರೆ.

**ಜನೌಷಧಿ ಕೇಂದ್ರ ಮುಚ್ಚುವ ಆದೇಶಕ್ಕೆ ಹೈಕೋರ್ಟ್ ತಡೆ. ಬಡವರಿಗೆ ಕಡಿಮೆ ದರದಲ್ಲಿ ಔಷಧಿ ನೀಡಿದರೆ ಸಮಸ್ಯೆ ಏನು: ಸರ್ಕಾರಕ್ಕೆ ಕೋರ್ಟ್ ಪ್ರಶ್ನೆ**

# ಸೋಯಾಬಿನ ಖರೀದಿಗೆ ಆಗುತ್ತಿರುವ ಸಮಸ್ಯೆ ನಿವಾರಣೆಗೆ ಮನವಿ



**ಮಲ್ಲಮ್ಮ ನುಡಿ ವಾರ್ತೆ ಬೀದರ:** ಸೋಯಾಬಿನ, ಉದ್ದು ಬೆಳೆಗಳ ಬೆಂಬಲ ಬೆಲೆ ಯೋಜನೆ ಅಡಿ ಖರೀದಿಗೆ ಸೂಕ್ತ ಸಮಯಕ್ಕೆ ಲಾರಿ ಬರುವುದೇ ಇರುವದು, ಖಾಲಿ ಚೀಲ ಕಳಿಸದೆ ಇರುವುದು, ಇದರಿಂದ ಖರೀದಿ ಪ್ರಕ್ರಿಯೆ ತಡವಾಗುತ್ತಿದ್ದು ಇಂತಹ ಸಮಸ್ಯೆ ನಿವಾರಣೆಗೆ ಕುರಿತು ವೀಣಾಕುಮಾರಿ ಅವರಿಗೆ ಮನವಿ ಮೂಲಕ ತಿಳಿಸಲಾಯಿತು. ಜಿಲ್ಲೆಯ ವಿವಿಧ ಪಿ.ಕೆ.ಪಿ.ಎಸ್, ಪದಾಧಿಕಾರಿಗಳು ಸೇರಿ ಮಾಡಿದ ಸಭೆಯಲ್ಲಿ

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಬೀದರ ಕಾರ್ಯಾಲಯದಲ್ಲಿ ಬುಧವಾರ ಏನ್.ಎ.ಎಫ್.ಇ.ಡಿ ನ ಮ್ಯಾನೇಜರ್ ಆದ ವೀಣಾ ಕುಮಾರಿ ಮೇಡಂ ಅವರಿಗೆ ಮಾಹಿತಿ ನಿಡಿದರು.

ಖರೀದಿ ಕೇಂದ್ರಕ್ಕೆ ಸಕಾಲದಲ್ಲಿ, ಖಾಲಿ ಚೀಲ, ಬಾರ್ಕೋಡ್, ಲಾರಿ ವ್ಯವಸ್ಥೆ ಮಾಡಿಸಿ ಹಾಗೂ ಇಲ್ಲಿದೆ ಇರುವ ಕಾರಣ ಇಲ್ಲಿ ವರಗೆ ಬಹಳ ಕಡಿಮೆ ಬೆಳೆ ಖರೀದಿ ಮಾಡಲಾಗಿದೆ, ಹೆಚ್ಚಿನ ಸಂಖ್ಯೆ ರೈತರ ಬೆಳೆ ಖರೀದಿ ಮಾಡುವುದು ಬಾಕಿ ಇದೆ, ಅದರಿಂದ

ಖರೀದಿ ದಿನಾಂಕವನ್ನು ಜನೆವರಿ ವರೆಗೆ ವಿಸ್ತರಿಸಬೇಕೆಂದು ಗುರುನಾಥ ವಟಗೆ ಅಧ್ಯಕ್ಷರು ಮುಧೋಳ ಪಿ.ಕೆ.ಪಿ.ಎಸ್. ಮುಧೋಳ ಇವರು ಅಧಿಕಾರಗಳ ಗಮನಕ್ಕೆ ತಂದರು.

ನವದೆಹಲಿ ಇಂದ ಬಂದ, ಏನ್.ಎ.ಎಫ್.ಇ.ಡಿ ನ ಮ್ಯಾನೇಜರ್ ಆದ ವೀಣಾ ಕುಮಾರಿ ಮೇಡಂ ಮಾತನಾಡಿ, ಎಲ್ಲ ಸಮಸ್ಯೆವನ್ನು ಬಗ್ಗೆ ಹರಿಸುವ ಕ್ರಮ ತೆಗೆದು–ಕೊಂಡು ಸೂಕ್ತ ರೀತಿ ಎಲ್ಲಾ ನೊಂದಣಿ ಮಾಡಿದ ರೈತರ ಬೆಳೆ ಖರೀದಿ ಮಾಡುವಂತೆ ಮಾಡುವ ವಿಶ್ವಾಸ ನಿಡಿದರು. ಲಾರಿ ಮಾಲೀಕರಿಗೆ ಸೂಕ್ತ ರೀತಿ ವರ್ಗಾವಣೆ ಮಾಡುವ ಬಗ್ಗೆ ಅದೇಶ ನೀಡಿದರು.

ಈಸಂದರ್ಭದಲ್ಲಿಮಲ್ಲಿಕಾರ್ಜುನ ಮ್ಯಾನೇಜರ್ ಮಹಾ ಮಂಡಳಿ ಬೀದರ್, ಫಾಳರೆಡ್ಡಿ ಅಧ್ಯಕ್ಷರು ಜೊಜನಾ, ಬಸವರಾಜ ಸ್ವಾಮಿ ಕಾರ್ಯದರ್ಶಿಗಳು ಸಂತಪುರ, ಸೇರಿದಂತೆ ಜಿಲ್ಲೆಯ ವಿವಿಧ ಪಿ. ಕೆ.ಪಿ. ಎಸ್ ಅಧ್ಯಕ್ಷರು ಕಾರ್ಯದರ್ಶಿಗಳುಭಾಗವಹಿಸಿದರು.

ಇದೆ ವೇಳೆ ಅಧಿಕಾರಗಳಿಗೆ ಗೌರವ ಸನ್ಮಾನ ಮಾಡಿ ಸನ್ಮಾನಿಸಲಾಯಿತು.

# ವಿಕಲಚೇತನರ ದಿನಾಚರಣೆ ಹಾಗೂ ಕ್ರಿಸ್ಮಸ್ ಹಬ್ಬ ಪ್ರಯುಕ್ತ ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ ಬೀದರ್:**

ವಿಶೇಷ ವಿಕಲಚೇತನರ ದಿನಾಚರಣೆ ಹಾಗೂ ಕ್ರಿಸ್ಮಸ್ ಹಬ್ಬ ಆಚರಣೆ ಪ್ರಯುಕ್ತ ನ್ಯೂನ್ಯತೆಗೆ ಒಳಗಾಗಿರುವ ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಣೆ ಮಾಡಲಾಯಿತು.

ಹುಮನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಆಚರಣೆ ಮಾಡಲಾಯಿತು.

ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಲ್ಲಿ ವಿಶೇಷವಾಗಿರುವಂತಹ ಚೈತನ್ಯವನ್ನು ತುಂಬಿ ಸಮಾಜದಲ್ಲಿ ಸಾಮಾನ್ಯ ಮಕ್ಕಳು ಬದುಕಿ ಬಾಳಬೇಕೆಂಬ ಉದ್ದೇಶದಿಂದ ಹುಟ್ಟಿದ ಮಕ್ಕಳನ್ನು ಹಿಡಿದುಕೊಂಡು ಎಂಟು ವರ್ಷದ ಒಳಗಡೆ ಇರುವಂತಹ ಮಕ್ಕಳಿಗೆ ಸರ್ಕಾರದಿಂದ ಅನೇಕ ಯೋಜನೆಗಳಿಂದ ಮಕ್ಕಳಿಗೆ ಸೌಲಭ್ಯಗಳನ್ನು ಕಲ್ಪಿಸುವಂತಹ ಕಾರ್ಯವನ್ನು ನಮ್ಮ ಸಂಸ್ಥೆ ವತಿಯಿಂದ ಒದಗಿಸಿಕೊಡುತ್ತಿದ್ದೇವೆ.

ಹಾಗೂ ಸಾಧನೆ ಸಲಕರಣೆಗಳು ಹಾಗೂ ಪೌಷ್ಠಿಕ ಆಹಾರವನ್ನು ವಿತರಣೆ ಮಾಡುತ್ತೇವೆ ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಮಾಹಿತಿ ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಆಗಿರುವಂತ ಶ್ರೀಮತಿ ಮಲ್ಲಮ್ಮ ರವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಜನಿಸುವುದಕ್ಕೆ ಪ್ರಮುಖವಾಗಿರುವಂತಹ ಕಾರ್ಯಗಳನ್ನು ತಿಳಿಸುತ್ತಾ ಬಾಲ್ಯ ವಿವಾಹ ರಕ್ತ ಸಂಬಂಧದಲ್ಲಿ ವಿವಾಹ ಆಗುವುದರಿಂದ, ವಿಕಲಚೇತನರು ಹುಟ್ಟುವ ಸಂಭವಿರುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮಹಿಳೆಯರಿಗೋಸ್ಕರ 5 ಯೋಜನೆಗಳಿದ್ದು ಅದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

ಅಪೌಷ್ಟಿಕತೆನೆ ತಡೆಗಟ್ಟೋದಕ್ಕೆ ಮನೆಯಲ್ಲೇ ನೆನೆಸಿರುವ ಕಾಳುಗಳನ್ನ ಮೊಳಕೆ ಬಂದ ಮೇಲೆ ಸೇವಿಸುವುದರಿಂದ ಅಪೌಷ್ಟಿಕತೆಯನ್ನು ಹೋಗಲಾಡಿಸಬಹುದು. ಹೆಚ್ಚು ಹೆಚ್ಚು ತರಕಾರಿಗಳು ಸೇವನೆ ಮಾಡುವುದರಿಂದ ಮಕ್ಕಳು ಮತ್ತು ತಾಯಂದಿರ ಆರೋಗ್ಯವಾಗಿರಲು ಸಾಧ್ಯವಾಗುತ್ತದೆ.

ವಿಕಲಚೇತನ ಮಕ್ಕಳು ಹುಟ್ಟಿದ್ದರಿಂದ ನಿರ್ಲಕ್ಷ್ಯ ಮಾಡದೆ ಚಟುವಟಿಕೆಗಳ ಮುಖಾಂತರ ಬದಲಾವಣೆ ತರುವಂತ ಕೆಲಸ ಕಾರ್ಯಗಳು ಪಾಲಕರು ನಿರ್ವಹಿಸಬೇಕು. ಆರ್ಬಿಟ್ ಸಂಸ್ಥೆಯವರು ಉತ್ತಮವಾದ ಕೆಲಸ ಕಾರ್ಯಗಳು ಮಾಡಲಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 54 ಜನರು ಭಾಗವಹಿಸಿದರು.

ಇದೇ ಸಂದರ್ಭದಲ್ಲಿ ಕಾರ್ಯಕ್ರಮ ನಿರೂಪಣೆಯನ್ನು ಸಂಯೋಜಕಿ ಶ್ರೀಮತಿ ಮಮತಾ, ಸೂರ್ಯಕಾಂತ ್,ವಂದನಾರ್ಪಣೆಯನ್ನು ಕವಿತಾ ನೆರವೇರಿಸಿದರು,

# ಸಾಮಾಜಿಕ ಲೆಕ್ಕ ಪರಿಶೋಧನೆ ಸಭೆ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ತಾಲೂಕಿನ ಖೇಡ್ ಗ್ರಾಮದ ಗ್ರಾಮ ಪಂಚಾಯತ ಕಚೇರಿಯಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ಮತ್ತು ಗ್ರಾಮ ಸಭೆ ನಡೆಯಿತು.

ಲೆಕ್ಕ ಪರಿಶೋಧನೆ ಅಧಿಕಾರಿ ಆನಂದ ಹೊಸಮಣಿ ಮಾತನಾಡಿ, ಸಾಮಾಜಿಕ ಲೆಕ್ಕ ಪರಿಶೋಧನೆಯ ಗ್ರಾಮ ಸಭೆಯು ಗ್ರಾಮೀಣಾಭಿವೃದ್ಧಿ ಯೋಜನೆಗಳಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಖಚಿತಪಡಿಸಿಕೊಳ್ಳಲು ಇರುವ ಒಂದು ಅತ್ಯಂತ ಶಕ್ತಿಯುತವಾದ ಸುವ್ಯವಸ್ಥೆಯಾಗಿದೆ ಎಂದು ಹೇಳಿದರು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ 2024–25ನೇ ಸಾಲಿನ ನರೇಗಾ ಮತ್ತು 15ನೇ ಹಣಕಾಸು ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳ ವರದಿಯನ್ನು ಮಂಡಿಸಲಾಯಿತು.

ಪಿಡಿಒ ರಾಮದಾಸ ಬೇಲೂರೆ, ಗ್ರಾ.ಪಂ. ಅಧ್ಯಕ್ಷ ಹಣಮಂತ ದಾನಾ, ಗ್ರಾಮಸ್ಥರಾದ ಅನೀಲಕುಮಾರ ಸಂಗಣ್ಣ, ರಾಮ ಭಾಲೇಕರ್, ಸುನೀಲ ಗೋರ್ಟೆ ಹಾಗೂ ಇನ್ನಿತರರು ಇದ್ದರು.

# ಯಮುನಾಬಾಯಿ ರಘುನಾಥಸಿಂಗ್ ನಿಧನ

**ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:** ಸುದ್ದಿಮೂಲ ಪ್ರಧಾನ ವರದಿಗಾರರಾಗಿದ್ದ ಪ್ರಸ್ತುತ ಕರ್ನಾಟಕ ಮಾಹಿತಿ ಆಯೋಗದ ಕಲಬುರ್ಗಿ ಪೀಠದ ಆಯುಕ್ತರಾದ ಬಿ.ವೆಂಕಟಸಿಂಗ್ ಅವರ ತಾಯಿ ಯಮುನಾಬಾಯಿ ರಘುನಾಥಸಿಂಗ್ ಇಂದು ಬೆಳಿಗ್ಗೆ ಕೊನೆಯುಸಿರೆಳೆದಿದ್ದಾರೆ.



ಅವರಿಗೆ 80 ವರ್ಷ ವಯಸ್ಸಾಗಿತ್ತು.

ಕಳೆದ 4 ದಿನಗಳಿಂದ ಕಲಬುರ್ಗಿಯ ಜಯದೇವ ಆಸ್ಪತ್ರೆಯಲ್ಲಿ ಹೃದಯ ಸಂಬಂಧಿ ಚಿಕಿತ್ಸೆ ಪಡೆಯುತ್ತಿದ್ದರು.

ಚಿಕಿತ್ಸೆ ಫಲಕಾರಿಯಾಗದೆ ಇಂದು ಬೆಳಿಗ್ಗೆ 10–30 ರ ಸುಮಾರಿಗೆ ಕೊನೆಯುಸಿರೆಳೆದಿದ್ದಾರೆ.

ಪತ್ರಕರ್ತರಾಗಿದ್ದ ಪ್ರಸ್ತುತ ಮಾಹಿತಿ ಆಯೋಗದ ಸದಸ್ಯ ಬಿ.ವೆಂಕಟಸಿಂಗ್, ಸತ್ಯನಾರಾಯಣ ಸಿಂಗ್, ಹನುಮಾನ್ ಸಿಂಗ್ ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಬಳಗ ಬಿಟ್ಟಗಲಿದ್ದಾರೆ. ಅವರ ಅಂತ್ಯಕ್ರಿಯೆ ರಾಯಚೂರು ನಗರದ ಬಿ ಆರ್ ಬಿ ವೃತ್ತದಲ್ಲಿರುವ ಮುಕ್ತಿಧಾಮದಲ್ಲಿ ಸಂಜೆ 6 ಗಂಟೆಗೆ ನೆರವೇರಲಿದೆ. ಅದಕ್ಕೂ ಮುನ್ನ ನಗರದ ಜ್ಯೋತಿ ಕಾಲೋನಿಯಲ್ಲಿರುವ ಬಿ.ವೆಂಕಟಸಿಂಗ್ ಅವರ ಮನೆಯಲ್ಲಿ ಪಾರ್ಥಿವ ಶರೀರದ ದರುಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

# ಅಪ್ರೆಂಟಿಸ್ ತರಬೇತಿಗಾಗಿ ತರಬೇತಿಗೆ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಬೀದರ್:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಬೀದರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಮಂಜುನಾಥ ಸುಳ್ಳೊಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ತರಬೇತಿಗಾಗಿ ಕರ್ನಾಟಕದಲ್ಲಿ ಕಾನೂನಾತ್ಮಕವಾಗಿ ಸ್ಥಾಪಿತಗೊಂಡ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪೂರ್ಣಗೊಳಿಸಿರುವ ಹಾಗೂ ಕಂಪ್ಯೂಟರ್ ಜ್ಞಾನವಿರುವ ಕನ್ನಡ ಭಾಷೆ ಬಳಸಲು ಪ್ರಬುದ್ಧತೆ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು.

ಮೆರಿಟ್ ಹಾಗೂ ಸಂದರ್ಶನದ ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಅರ್ಜಿ ಲಕೋಟೆಯ ಮೇಲೆ ಕಡ್ಡಾಯವಾಗಿ ವಿಶೇಷ ಘಟಕ ಯೋಜನೆಯಡಿ ಹಾಗೂ ಗಿರಿಜನ ಉಪಯೋಜನೆಯಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನೀಡುವ ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ ಎಂದು ನಮೂದಿಸಬೇಕು. ಆಯ್ಕೆಯಾದ

ಅಭ್ಯರ್ಥಿಗಳು ಸಂದರ್ಶನದ ವೇಳೆ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಆಯ್ಕೆಯಾಗಿ ತರಬೇತಿಗೆ ಹಾಜರಾಗುವ ಸಂದರ್ಭದಲ್ಲಿ ಮೂಲ ದಾಖಲಾತಿಗಳನ್ನು ಬೀದರ ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಸಲ್ಲಿಸಬೇಕು.

ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಅಭ್ಯರ್ಥಿಗಳು ಸ್ನಾತ್ತಕೋತ್ತರ ಅಂತಿಮ ವರ್ಷದ ಪದವಿಯ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು. ಅಂಕಪಟ್ಟಿಯನ್ನು ನಿರೀಕ್ಷಿಸಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ತರಬೇತಿಯ ಅವಧಿ ವೇಳೆ ಮಾಹೆಯಾನ 15,000 ರೂ. (ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಗಳ ಸ್ಟೈಫಂಡ್ ನೀಡಲಾಗುವುದು ಹಾಗೂ ತರಬೇತಿಯ ಅವಧಿ ಬೆಳ್ಳಿಗೆ 10 ರಿಂದ ಸಂಜೆ 5.30 ರವರೆಗೆ ಇರುತ್ತದೆ. ಈ ತರಬೇತಿಯು 2026ರ ಕ್ಯಾಲೆಂಡರ್ ಅವಧಿಯ ಜನವರಿ–2026ರ ಮಾಹೆಯಿಂದ ಪ್ರಾರಂಭಗೊಂಡು ಡಿಸೆಂಬರ್–2026ಕ್ಕೆ ಕೊನೆಗೊಳ್ಳಲಿದೆ. ಈ ತರಬೇತಿಯು 12 ತಿಂಗಳ ಅಪ್ರೆಂಟಿಸ್

ತರಬೇತಿಯಾಗಿದ್ದು, ತಾತ್ಕಾಲಿಕವಾಗಿರುತ್ತದೆ. ತರಬೇತಿ ಮುಗಿದ ನಂತರ ಮುಂದುವರೆಸಲು ಅಥವಾ ಖಾಯಂಗೊಳಿಸುವಂತೆ ಒತ್ತಡ ತರುವಂತಿಲ್ಲ ಹಾಗೂ ತರಬೇತಿಯ ಅವಧಿಯಲ್ಲಿ ಬೇರೆ ಉದ್ಯೋಗ ಮಾಡಬಾರದು. ತರಬೇತಿ ಅವಧಿಯ ಮಧ್ಯದಲ್ಲಿ ಬಿಟ್ಟು ಹೋದರೆ ಮೂಲ ದಾಖಲಾತಿಗಳನ್ನು ಅವಧಿಗೆ ಮುನ್ನ ಹಿಂದುರುಗಿಸುವುದಿಲ್ಲ.

ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಖಾಯಂ ಉದ್ಯೋಗ ಸಿಕ್ಕಿದಲ್ಲಿ ಷರತ್ತಿಗೊಳಪಟ್ಟು ಮೂಲ ದಾಖಲಾತಿಗಳನ್ನು ಹಿಂದಿರುಗಿಸಲಾಗುವುದು. ಒಮ್ಮೆ ಫಲಾನುಭವಿಯಾದವರನ್ನು ಈ ಯೋಜನೆಯಡಿ ಮತ್ತೊಂದು ಅವಧಿಗೆ ಆಯ್ಕೆ ಮಾಡಲು ಅವಕಾಶವಿರುವುದಿಲ್ಲ ಹಾಗೂ ಸುಳ್ಳು ಮಾಹಿತಿ ನೀಡಿ ಅರ್ಜಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು. ಈ ಎಲ್ಲಾ ಷರತ್ತುಗಳನ್ನು ಪಾಲಿಸುವುದಾಗಿ ಆಯ್ಕೆಯಾದ ಅಭ್ಯರ್ಥಿಗಳಿಂದ 20 ರೂ. (ಇಪ್ಪತ್ತು ರೂಪಾಯಿ ಮಾತ್ರ) ಗಳ ಛಾಪ ಕಾಗದದಲ್ಲಿ ಲಿಖಿತ ಹೇಳಿಕೆ ಪಡೆಯಲಾಗುವುದು. ಆಸಕ್ತರು ಅರ್ಜಿಯನ್ನು 2025ರ ಡಿಸೆಂಬರ್.11 ರಿಂದ 26 ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ರೈಲು ನಿಲ್ದಾಣದ ಆವರಣ, ಮಾಜಿ ಸೈನಿಕರ ಸಂಘದ ಕಚೇರಿ ಹತ್ತಿರ,

ಬೀದರ ಇಲ್ಲಿಗೆ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಬೀದರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ; 9632511437 ಹಾಗೂ 9740594747 ಗೆ ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತರ್ಕದ ಮನಸ್ಸಿನಿಂದ ವಿಸ್ವಾಸ ಹುಟ್ಟುವುದಿಲ್ಲ ರಾಜೇಶ್ವರ ಶಿವಾಚಾರ್ಯರು



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ತರ್ಕದ ಮನಸ್ಸಿನಿಂದ ಯಾವುದೇ ವಿಸ್ವಾಸ ಹುಟ್ಟುವುದಿಲ್ಲ. ಭಾವನಾತ್ಮಕವಾಗಿ ನೋಡಿದಾಗ ಮಾತ್ರ ವಿಸ್ವಾಸ ಬೆಳೆಯುವುದು ಎಂದು ಮೆಹಕರ ಕಟ್ಟಿಮನಿ ಹಿರೇಮಠ ಸಂಸ್ಥಾನದ ಶ್ರೀ ರಾಜೇಶ್ವರ ಶಿವಾಚಾರ್ಯರು ಪ್ರತಿಪಾದಿಸಿದರು.

ಹುಮನಾಬಾದ ತಾಲೂಕಿನ ಕನಕಟ್ಟಾ ಗ್ರಾಮದ ಸದ್ಗುರು ಶ್ರೀ ರೇವಪ್ಪಯ್ಯ ಮಂದಿರದಲ್ಲಿ ಆಯೋಜಿಸಿದ್ದ ಸದ್ಗುರು ರೇವಪ್ಪಯ್ಯನವರ ಹೋಳಿಗೆ ತುಪ್ಪ ಬಿನ್ನಹ ಜಾತ್ರೆಯ ಧರ್ಮಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಬದುಕನ್ನು ಧರ್ಮಕ್ಕಾಗಿ, ದೇಶಕ್ಕಾಗಿ ಸಮರ್ಪಿಸಿದ ಸದ್ಗುರ ರೇವಪ್ಪಯ್ಯನವರು ತಮ್ಮ ಕಾಲಾವಧಿಯಲ್ಲಿ ಎಲ್ಲರ ಒಳಿತಿಗಾಗಿ ಮಾಡಿದ ಪವಾಡಗಳು ಇಂದಿಗೂ ಪ್ರಸ್ತುತವಾಗಿವೆ. ಸದ್ಗುರು ರೇವಪ್ಪಯ್ಯನವರು ಬಿನ್ನಹ ಕಾರ್ಯಕ್ರಮದಲ್ಲಿ ತುಪ್ಪ ಕಡಿಮೆ ಬಿದ್ದರೆ ಬಾವಿಯಲ್ಲಿಯ ನೀರನ್ನು ತುಪ್ಪ ಮಾಡಿದ್ದು ಇಂದಿಗೂ ನೋಡಿದ ಹಿರಿಯರು ಮಾತನಾಡಿಕೊಳ್ಳುತ್ತಾರೆ. ತರ್ಕದ ಮನಸ್ಸಿನಿಂದ ನಾವು ಯಾವುದೇ ನೋಡಿದರು ಅದರಲ್ಲಿ ವಿಸ್ವಾಸ ಹುಟ್ಟುವುದಿಲ್ಲ. ಭಾವನಾತ್ಮಕವಾಗಿ ಪೂಜ್ಯರ ಮೇಲೆ ಭಕ್ತಿ ಭಾವದಿಂದ ನೋಡಿದಾಗ ಮಾತ್ರ ಸದ್ಗುರು ರೇವಪ್ಪಯ್ಯನವರ ಪವಾಡಗಳು ನಮಗೆ ಅರ್ಥವಾಗುತ್ತವೆ. ಭಾವನಾತ್ಮ ಜಗತ್ತಿಗೆ ಶಕ್ತಿಯಿದೆ. ನಾವೆಲ್ಲರೂ ಇಲ್ಲಿ ಪೂಜ್ಯರ ಮೇಲೆ ವಿಸ್ವಾಸವಿಟ್ಟು ಭಾವನಾತ್ಮಕವಾಗಿ ಜಾತ್ರೆಯಲ್ಲಿ ಪಾಲ್ಗೊಂಡಿದ್ದೇವೆ. ಇದರಿಂದ ನಮ್ಮ ಎಲ್ಲಾ ಸಮಸ್ಯಗಳಿಗೂ ಪರಿಹಾರ

ಸಿಗುವುದೆಂಬ ಭರವಸೆ ನಮಗಿದೆ. ಸದ್ದಗುರು ರೇವಪ್ಪಯ್ಯನವರು ಯಾವುದೇ ಜಾತಿ, ಮತ, ಭೇದ ಭಾವ ಮಾಡದೇ ಎಲ್ಲರೊಂದಿಗೂ ಬರೆಯುತ್ತಿದ್ದರು. ಅವರು ಕರೆದವರ ಮನೆಗೆ ಹೋಗಿ ಬಿನ್ನಹ ಸ್ವೀಕರಿಸುತ್ತಿದ್ದರು. ನಾವೆಲ್ಲರೂ ಭಾವನಾತ್ಮಕ ಕಣ್ಣಿನಿಂದ ಜಗತ್ತನ್ನು ನೋಡಿದಾಗ ಎಲ್ಲವೂ ಸರಿಯಾಗಿ ಕಾಣುವುದು ಎಂದು ಹೇಳಿದರು.

ಇದೇವೇಳೆ ಸತೀಶ ಮಣಿಗಿರೆ ದಂಪತಿಗಳು ಪೂಜ್ಯರ ಪಾದಪೂಜೆ ನೆರವೇರಿಸಿದರು.

ಅಲ್ಲದೇ ಸಾವಿರಾರು ಭಕ್ತರು ಹೋಳಿಗೆ ತುಪ್ಪ ಸವಿದು ಪುನಿತರಾದರು.

ಶಿವಕುಮಾರ ಕಲ್ಯಾಣರಾವ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಗ್ರಾಮದ ಸದ್ಭಕ್ತರಾದ ಬಸವರಾಜ ಮಂದಕನಳ್ಳಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಗುಂಡಪ್ಪ ಮಣಿಗೀರೆ, ಬಸವರಾಜ ಮಣಗೀರೆ, ಚನ್ನಪ್ಪ ಮುಸ್ತಾಪುರೆ, ಚಂದ್ರಕಾಂತ ಬಿರಾದಾರ ನಾವದಗಿ, ಜಯರಾಜ ದಾಬಶೆಟ್ಟಿ, ಶಾರದಾಬಾಯಿ ಹಂದ್ರಾಳೆ, ವಿದ್ಯಾವತಿ ಮಣಿಗೀರೆ, ಕಾಶೆಮ್ಮ ಮಣಗೀರೆ ಉಪಸ್ಥಿತರಿದ್ದರು.

# ಬಸವಜ್ಯೋತಿ ಪಾದಯಾತ್ರೆ

**ಮಲ್ಲಮ್ಮ ನುಡಿ ವಾರ್ತೆ**

**ಕಮಲನಗರ:**



ಶತಾಯುಷಿ ಡಾ.ಚನ್ನಬಸವ ಪಟ್ಟದ್ದೇವರ136ನೇಜಯಂತ್ಯುತ್ಸವ ಅಂಗವಾಗಿ ಅವರ ಜನ್ಮಭೂಮಿ ಆಗಿರುವ ಕಮಲನಗರದಿಂದ ಇಂದು ಬಸವಜ್ಯೋತಿ ಪಾದಯಾತ್ರೆ ನಡೆಯಲಿದೆ. ಬೆಳಗ್ಗೆ 9 ಗಂಟೆಗೆ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ಸಾನಿಧ್ಯದಲ್ಲಿ ಕಮಲನಗರದಿಂದ ಪಾದಯಾತ್ರೆ ಪ್ರಾರಂಭವಾಗಿ ಡಿಗ್ಗಿ, ಹೊಳೆಸಮುದ್ರ, ಸಾವಳಿ ಮಾರ್ಗವಾಗಿ ಸಂಗಮದಲ್ಲಿ ರಾತ್ರಿ ವಾಸ್ತವ್ಯ

ಮಾಡಿ, ನಾಳೆ ಸಂಗಮ ದಿಂದ ಹೊರಟು ಆಳಂದಿ, ಡೋಣಗಾಪೂರ ಗ್ರಾಮದ ಮಾರ್ಗವಾಗಿ ಶನಿವಾರ ಸಾಯಂಕಾಲ 5 ಹೆಚ್ಚಿನ ಗಂಟೆಗೆ ಭಾಲ್ಕಿಯ ಚನ್ನಬಸವಾಶ್ರಮ ತಲುಪಲಿದೆ. ಜಿಲ್ಲೆಯ ಸದ್ಭಕ್ತರು ಪಾದಯಾತ್ರೆಯಲ್ಲಿ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಹಿರೇಮಠ ಸಂಸ್ಥಾನದಿಂದ ಪ್ರಕಟಣೆ ಮೂಲಕ ಮನವಿ ಮಾಡಲಾಗಿದೆ.

# ಹಾನಿಯಾದ ರಸ್ತೆ ಸೇತುವೆಗಳ ದುರಸ್ಥಿಗೆ ಕಡಿಮೆ ಅನುದಾನ ಶಾಸಕ ಪ್ರಭು ಚವ್ಹಾಣ

**ಮಲ್ಲಮ್ಮ ನುಡಿ ವಾರ್ತೆ ಔರಾದ(ಬಿ) :**

ಪ್ರಸಕ್ತ ಸಾಲಿನಲ್ಲಿ ಭಾರಿ ಮಳೆಯಿಂದ ಹಾನಿಯಾಗಿರುವ ಔರಾದ(ಬಿ) ಮತಕ್ಷೇತ್ರದ ರಸ್ತೆ, ಸೇತುವೆಗಳ ದುರಸ್ಥಿಗೆ 29.34 ಲಕ್ಷ ಬಿಡುಗಡೆ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ನೀಡಿದ ಮಾಹಿತಿಗೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಬೇಸರ ವ್ಯಕ್ತಪಡಿಸಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಶಾಸಕರು ಕೇಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ಲಿಖಿತವಾಗಿ ಉತ್ತರಿಸಿದ ಸಚಿವರು, ಔರಾದ(ಬಿ) ಮತಕ್ಷೇತ್ರದಲ್ಲಿ ಭಾರಿ ಮಳೆಯಿಂದ ಕೆಲವು ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. 2025–26ನೇ ಸಾಲಿನ ಮುಖ್ಯಮಂತ್ರಿಗಳ ಅನುದಾನದಡಿ 39.13 ಲಕ್ಷ ಮಂಜೂರು ಮಾಡಿದ್ದು, 29.34 ಲಕ್ಷ ಬಿಡುಗಡೆ ಮಾಡಲಾಗಿದೆ ಎಂದಿದ್ದಾರೆ. ಪ್ರಗತಿ ಪಥ ಯೋಜನೆಯಡಿ ಔರಾದ(ಬಾ) ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 22 ಕಿ.ಮೀ ಉದ್ದದ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು 16.04 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ. ಆರ್ಥಿಕ ಇಲಾಖೆಯು ಕಾಲ ಕಾಲಕ್ಕೆ ಒದಗಿಸುತ್ತಿರುವ ಅನುದಾನದ ಮಿತಿಯೊಳಗೆ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಬೇಕಿದೆ ಎಂದು ಉತ್ತರಿಸಿದ್ದಾರೆ.

ಈ ಉತ್ತರದಿಂದ ನಿರಾಶರಾಗಿರುವ ಶಾಸಕರು, ಪ್ರಸಕ್ತ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಹಾನಿ ಸಂಭವಿಸಿದ್ದು, ಗ್ರಾಮೀಣ ಭಾಗದ ಎಲ್ಲ ರಸ್ತೆಗಳು ಕೊಚ್ಚಿಕೊಂಡು ಹೋಗಿವೆ. ರಸ್ತೆಗಳನ್ನು ದುರಸ್ತಿ ಮಾಡಿಕೊಡುವಂತೆ ಅನೇಕ ಸಲ ಮುಖ್ಯಮಂತ್ರಿಗಳು, ಸಚಿವರನ್ನು ಭೇಟಿಯಾಗಿದ್ದೇನೆ. ಈ ವರ್ಷ ಹಿಂದೆ–ಂದೂ ಕಂಡು ಕೇಳರಿಯದ ರೀತಿಯಲ್ಲಿ ದಾಖಲೆ ಪ್ರಮಾಣದ ಮಳೆಯಾಗಿದ್ದು, ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅತಿ ಹೆಚ್ಚಿನ ಹಾನಿ ಔರಾದ(ಬಿ) ಕ್ಷೇತ್ರದಲ್ಲಿ ಉಂಟಾಗಿದೆ. ಎಲ್ಲ ಭಾಗಗಳಲ್ಲಿ ರಸ್ತೆ, ಸೇತುವೆ, ಕೆರೆ–ಕಟ್ಟೆಗಳು ಒಡೆದಿವೆ. ಜನ–ಜಾನುವಾರುಗಳು ಕೊಚ್ಚಿ–ಕೊಂಡು ಹೋಗಿವೆ. ಶಾಲೆ, ಅಂಗನವಾಡಿ ಸೇರಿದಂತೆ ಅನೇಕ ಸಾರ್ವಜನಿಕ ಆಸ್ತಿಪಾಸ್ತಿಗಳು ಹಾನಿಗೀಡಾಗಿದ್ದು, ನೂರಾರು ಕೋಟಿ ನಷ್ಟವಾಗಿದೆ. ಆದರೆ ಸಂಕಷ್ಟದಲ್ಲಿರುವ ಜನತೆಗೆ ನೆರವಾಗಬೇಕಾದ ಸರ್ಕಾರ ಅತ್ಯಲ್ಪ ಪ್ರಮಾಣದ ಅನುದಾನ ನೀಡುವ ಮೂಲಕ ಜನ ವಿರೋಧಿಯಂತೆ ನಡೆದುಕೊಂಡಿದೆ ಎಂದು ಸರ್ಕಾರದ ವಿರುದ್ಧ ಕಿಡಿ ಕಾರಿದ್ದಾರೆ. ಅತೀವೃಷ್ಠಿಯಿಂದ ಹಾನಿಯಾಗಿರುವ ಎಲ್ಲ ರಸ್ತೆ, ಸೇತುವೆ, ಶಾಲೆ, ಅಂಗನವಾಡಿ ಸೇರಿದಂತೆ ಸರ್ಕಾರಿ ಕಛೇರಿಗಳನ್ನು ದುರಸ್ತಿಗೊಳಿಸಲು ವಿಶೇಷ ಪ್ಯಾಕೇಜ್ ನೀಡುವಂತೆ ಸರ್ಕಾರವನ್ನು ಒತ್ತಾಯಿದ್ದೆ. ಸರ್ಕಾರ ಕಣ್ಣು, ಕಿವಿ ಇಲ್ಲದಂತೆ ವರ್ತಿಸುತ್ತಿದ್ದು, ನೊಂದವರ ಧ್ವನಿ ಕೇಳಿಸಿಕೊಳ್ಳುತ್ತಿಲ್ಲ ಎಂದಿದ್ದಾರೆ.

ಸರ್ಕಾರ ಕೂಡಲೇ ಅತೀವೃಷ್ಠಿ ಪೀಡಿತ ಪ್ರದೇಶಗಳಲ್ಲಿ ಹಾನಿಯಾಗಿರುವ ಎಲ್ಲ ರಸ್ತೆ, ಸೇತುವೆ, ಸಾರ್ವಜನಿಕ ಆಸ್ತಿಪಾಸ್ತಿಯ ದುರಸ್ತಿಗೆ ಮುಂದಾಗಬೇಕು. ಇದಕ್ಕಾಗಿ ಹೆಚ್ಚಿನ ಅನುದಾನ ಒದಗಿಸಬೇಕೆಂದು ಸರ್ಕಾರವನ್ನು ಆಗ್ರಹಿಸಲಾಗಿದೆ ಎಂದು ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವ ಮಾನವ ಹಕ್ಕು ದಿನಾಚರಣೆ ಕುರಿತು ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ



**ಮಲ್ಲಮ್ಮ ನುಡಿ ವಾರ್ತೆ ಬೀದರ:**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಕ್ಷೇತ್ರ ಶಿಕ್ಷಣ ಅಧಿಕಾರಿಗಳ ಕಛೇರಿ ಶಾಲಾ ಶಿಕ್ಷಣ ಇಲಾಖೆ ಬೀದರ ಅವರುಗಳ ಸಂಯುಕ್ತಾಶ್ರಯದಲ್ಲಿಂದು ಸರ್ಕಾರಿ ಆದರ್ಶ ವಿಧ್ಯಾಲಯ ಜನವಾಡ ಬೀದರನಲ್ಲಿ ವಿಶ್ವಮಾನವ ಹಕ್ಕು ದಿನಾಚರಣೆ ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮಕ್ಕೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಾಶ ಅರ್ಜುನ ಬನಸೋಡೆ ಅವರು ಸಸೀಗೆ ನೀರೆವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ನಂತರ ಮಾನವ ಹಕ್ಕುಗಳು ಮತ್ತು ಪೋಕ್ಸೋ ಕಾಯ್ದೆ ಕುರಿತು ಮಕ್ಕಳಿಗೆ ತಿಳಿಸಿದ್ದರು.

ಬೀದರ ಜಿಲ್ಲಾ ವಕೀಲರ ಸಂಘದ ಸನ್ಮುಖಯ್ಯಾ ಬಿ ಸ್ವಾಮಿ ಅವರು ಮಾನವ ಹಕ್ಕುಗಳು ಕುರಿತು ಮಾತನಾಡಿದ್ದರು. ಉಪನ್ಯಾಸಕರಾಗಿ ಬೀದರ ವಕೀಲರಾದ ಉದಯಕುಮಾರ ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸವಲತ್ತುಗಳ ಕುರಿತು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಬಾಬುರಾವ ಸನಾತನ ಮುಖ್ಯಗುರುಗಳು ಸರ್ಕಾರಿ ಆದರ್ಶ ವಿಧ್ಯಾಲಯ ಜನವಾಡ ಮತ್ತು ತಾನಾಜಿ ಕಾರ್ಬಾರಿ ಬಿ,ಆರ್.ಸಿ ಬೀದರ, ಸಂಜೀವಕುಮಾರ ಮೇಟಿ, ಶಿಕ್ಷಣ ಸಂಯೋಜಕರು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಬೀದರ, ಹೈದರ ಇ.ಸಿ.ಒ ಬೀದರ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಸರ್ಕಾರಿ ಆದರ್ಶ ವಿಧ್ಯಾಲಯ ಜನವಾಡ ಶಾಲೆಯ ಸಿಬ್ಬಂಧಿ ವರ್ಗದವರು ಸೇರಿದಂತೆ ಮಕ್ಕಳು ಉಪಸ್ಥಿತರಿದ್ದರು.

# ಆರೋಗ್ಯದ ಅರಿವು ಮೂಡಿಸಲು ಜಾನಪದ, ಬೀದಿನಾಟಕ ಪ್ರದರ್ಶನಕ್ಕೆ ಡಿ.ಹೆಚ್.ಓ ಚಾಲನೆ



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಯೋಜನೆ, ಕಾರ್ಯಕ್ರಮಗಳ ಕುರಿತು ಜನ ಜಾಗೃತಿ ಮೂಡಿಸುವ ಜಾನಪದ ಕಲಾತಂಡ, ಬೀದಿನಾಟಕ ಪ್ರದರ್ಶನಕ್ಕೆ ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಗಳಾದ ಡಾ.ಮಹೇಶ್ ಬಿರಾದಾರ ಅವರು ಚಾಲನೆ ನೀಡಿದರು.

ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಜಾನಪದ ಕಲಾತಂಡ, ಬೀದಿನಾಟಕ ಪ್ರದರ್ಶನ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ರಾಜ್ಯಾದ್ಯಾಂತ ಎಲ್ಲಾ ಜಿಲ್ಲೆಗಳಲ್ಲಿ ಚಾಲನೆ ನೀಡಲಾಗುತ್ತಿದ್ದು, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ, ಭ್ರೂಣ ಹತ್ಯೆತಡೆ, ರಕ್ತಹೀನತೆ, ಅಪೌಷ್ಠಿಕತೆ, ತಾಯಿ ಮಕ್ಕಳ ಆರೋಗ್ಯ, ಸಾಂಕ್ರಾಮಿಕ ಹಾಗೂ ಅಸಾಂಕ್ರಾಮಿಕ ರೋಗಗಳು ಮತ್ತು ಕ್ಷಯ, ಮಲೇರಿಯಾ ಮುಕ್ತ ಭಾರತ ಮಾಡುವ ನಿಟ್ಟಿನಲ್ಲಿ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

ಯಾದಗಿರಿ ಜಿಲ್ಲೆಯಲ್ಲಿ ಒಂದು ವಾರ ಜಾನಪದ ಕಲಾತಂಡ, ಬೀದಿನಾಟಕ ಪ್ರದರ್ಶನ ನಡೆಯಲಿದೆ, ಆರೋಗ್ಯ ಜಾಗೃತಿ ಕುರಿತು ನಾಟಕ ಮತ್ತು ಗೀತೆಗಳ ಮೂಲಕ ಪ್ರತಿ ಮನೆ ಮನೆಗೂ ತಲುಪಿಸಲಾಗುತ್ತಿದೆ, ಸಮಾಜದ ಕಟ್ಟಕಡೆಯ ಜನರಿಗೂ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು ಅವಶ್ಯಕವಾಗಿದೆ, ಆರೋಗ್ಯ ಸಮಸ್ಯೆ ಎದುರಾಗುವ ಮುನ್ನವೆ ಎಚ್ಚರವಹಿಸುವ ಅಗತ್ಯವಿದೆ. ಜನರಿಗೆ ಉತ್ತಮ ಆರೋಗ್ಯದ ಕುರಿತು ಅರಿವು ಮೂಡಿಸುವುದು ಸರಕಾರದ ಉದ್ದೇಶವಾಗಿದ್ದು, ಬೀದಿನಾಟಕ ಹಾಗೂ ಜಾಗೃತಿ ಗೀತೆಗಳನ್ನು ಹೆಚ್ಚು ಜನರ ಮನ ಮುಟ್ಟುವಂತಾಗಬೇಕು, ಸಾರ್ವಜನಿಕರು ಈ ಯೋಜನೆಯ ಲಾಭವನ್ನು ಪಡೆದುಕೊಂಡು ಜಾಗೃತವಹಿಸಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಲಕ್ಷ್ಮೀ ಮುಂಡಾಸ್, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀ ಜಗನ್ನಾಥ, ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿಗಳಾದ ತುಳಸಿರಾಮ ಚವ್ಹಾಣ, ಪ್ರಭಾರಿ ಜಿಲ್ಲಾ ಆರೋಗ್ಯ ಮೇಲ್ವಿಚಾರಣಾ ಅಧಿಕಾರಿಗಳಾದ ಶಾಂತಿಲಾಲ್, ಆಯುಷ್ ವೈದ್ಯಾರಾದ ಡಾ.ನಾಗರಾಜ, ಆರೋಗ್ಯ ನಿರಿಕ್ಷಣಾಧಿಕಾರಿಗಳಾದ ಪ್ರಭಾರಕರ್ ರೆಡ್ಡಿ, ಗ್ರೂಪ್.ಡಿ.ನವೀನ್ ಕುಮಾರ್, ಯಾದಗಿರಿ ಸ್ವರ ಸಾಮ್ರಾಟ ಕಲಾತಂಡ ಮುಖ್ಯಸ್ಥರಾದ ಶರಣು ನಾಟೇಕರ್, ಕಲಾ ತಂಡದ ಸದಸ್ಯರು, ಗ್ರಾಮದ ಇನ್ನಿತರರು ಉಪಸ್ಥಿತರಿದ್ದರು.

# ಅಪರಿಚಿತ ಮೃತ ವಾರಸುದಾರರ ಪತ್ತೆಗೆ ಮನವಿ

ಯಾದಗಿರಿ : 2025ರ ಡಿಸೆಂಬರ್ 6 ರಂದು ಬೆಳಿಗ್ಗೆ 7 ಗಂಟೆಗೆ ಡಿ.ವೈ.ಎಸ್.ಎಸ್ ರಾಯಚೂರು ರೈಲ್ವೇ ನಿಲ್ದಾಣದಲ್ಲಿ ರಾಜೇಶ ಕುಮಾರ ಮೀನಾ ತಂದೆ ರಾಮನಿವಾಸ ಮೀನಾ ಒಂದು ಲಿಖಿತ ಮೆಮೊವನ್ನು ಠಾಣೆಗೆ ಕಳುಹಿಸಿಕೊಟ್ಟಿದ್ದನ್ನು ಸ್ವೀಕರಿಸಿ ನೋಡದ ತಕ್ಷಣ ಯಾದಗಿರಿ ರೈಲು ನಿಲ್ದಾಣದ ಯಾವುದೋ ಚಲಿಸುವ ರೈಲುಗಾಡಿಗೆ ಅಡ್ಡ ಬಿದ್ದು, ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟ ಹಿನ್ನೆಲೆ ಯು.ಡಿ.ಆರ್, ಬಿಎನ್‌ಎಸ್‌ಎಸ್ ರಿತ್ಯಾ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿದಿದೆ ಎಂದು ರಾಯಚೂರು ರೈಲ್ವೆ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಅವರು ತಿಳಿಸಿದ್ದಾರೆ. ಮೃತದೇಹ ದೊರೆತ ಘಟನಾ ಸ್ಥಳಗಳಲ್ಲಿ ಮೃತನ ವಾರಸುದಾರರು ಯಾರು ಪತ್ತೆಯಾಗಿರುವುದಿಲ್ಲ. ಮೃತನ ವಾರುಸುದಾರ ಪತ್ತೆ ಹಾಗೂ ಪಿ.ಎಂ.ಇ. ಸಲುವಾಗಿ ಮೃತದೇಹಗಳನ್ನು ರಾಯಚೂರು ಜಿಲ್ಲಾ ಸರಕಾರಿ ರೀಮ್ಸ್ ಆಸ್ಪತ್ರೆಯ ಶೀತಲಶವಗಾರದಲ್ಲಿಟ್ಟಿರುತ್ತದೆ. ಅಪರಿಚಿತ ಪುರುಷ ಸುಮಾರು 40 ವರ್ಷ, ಎತ್ತರ ಸುಮಾರು 5 ಫೀಟ್ 8 ಇಂಚು, ಕಪ್ಪು ಕೂದಲು, ಗಡ್ಡ ಮೀಸೆ ಶೇವ್ ಮಾಡಿರುತ್ತಾನೆ. ಸಾಧಾರಣ ಶರೀರ ಹೊಂದಿದೆ.ಬಟ್ಟೆಬರೆ : ಒಂದು ಕಂದು ಬಣ್ಣದ ಶರ್ಟ್, ಒಂದು ಕಪ್ಪು ಬಣ್ಣದ ಬನಿಯಾನ್, ಒಂದು ನೀಲಿ ಬಣ್ಣದ ಜೀನ್ಸ್ ಪ್ಯಾಂಟು, ಒಂದು ಕೆಂಪು ಬಣ್ಣದ ಚಡ್ಡಿ, ಈ ಅಪರಿಚಿತ ಮೃತನ ವಾರಸುದಾರರು ಪತ್ತೆಯಾದಲ್ಲಿ ಮೃತನ ಹೋಲಿಕೆಯ ಪುರುಷ ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂ.ಸಂ.08532231716, ಮೊ.ನಂ.9480802111, ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ.08022871291ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೃಷ್ಣದೇವರಾಯ ವಿವಿಯಲ್ಲಿ ಉದ್ಯೋಗ ಕೋಶ ಅನುಷ್ಠಾನ ಕಾರ್ಯಾಗಾರ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ,:

ವಿದ್ಯಾರ್ಥಿಗಳು ತಂತ್ರಜ್ಞಾನದ ಸರಿಯಾದ ಬಳಕೆಯಿಂದ ಜೀವನ ರೂಪಿಸಿಕೊಳ್ಳುವ ಶಿಲ್ಪಿಯಾಗಬಹುದು ಎಂದು ಬೆಂಗಳೂರು ಇಂಡಿಯಾ4ಐಎಎಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ಸಿ ಶ್ರೀನಿವಾಸ ಹೇಳಿದರು.

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ. ಬಿ ಆರ್ ಅಂಬೇಡ್ಕರ್ ಸಭಾಭವನದಲ್ಲಿ ವಿವಿ ಅಧೀನದ ಕಾಲೇಜುಗಳ ಪ್ಲೇಸ್‌ಮೆಂಟ್ ಸೆಲ್ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಎರಡು ದಿನಗಳ 'ಉದ್ಯೋಗ ಮಹತ್ವ ಹಾಗೂ ಉದ್ಯೋಗ ಕೋಶದ ಅನುಷ್ಠಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಯುಗದಲ್ಲಿ ಕೋಟ್ಯಾಂತರ ಉದ್ಯೋಗ ಆಕಾಂಕ್ಷಿಗಳು ಉದ್ಯೋಗಕ್ಕಾಗಿ ಹಂಬಲಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕನ್ನಡಿಗರೇ ಸ್ಥಾಪಿಸಿರುವ

ಸಂಸ್ಥೆಯಲ್ಲಿ ನೂರಾರು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿ ಯಶಸ್ವಿಯಾಗುತ್ತಿದ್ದಾರೆ ಎಂದರು.

ನಿವೃತ್ತ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ, ಪ್ಲೇಸ್‌ಮೆಂಟ್ ಸೆಲ್‌ನ ರಾಜ್ಯ ನೋಡಲ್ ಅಧಿಕಾರಿ ಪ್ರೊ.ಎ ನಾರಾಯಣ ಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕೊರತೆಯು ಹೆಚ್ಚಾಗುತ್ತಿದೆ. ತಾತ್ಸಾರ, ಕೀಳರಿಮೆಯನ್ನು ತೆಗೆದು ಹಾಕುವ ಮೂಲಕ ತಮ್ಮಲ್ಲಿರುವ ನೈಪುಣ್ಯತೆ ಬಳಸಿಕೊಳ್ಳಬೇಕು. ಉದ್ಯಮಶೀಲತೆ, ನಾವೀನ್ಯತೆ ಚಿಂತನೆಯನ್ನು ಮೂಡಿಸುವ ಉದ್ದೇಶದಿಂದ ಕಾರ್ಯಾಗಾರವನ್ನು ವಿವಿಯಲ್ಲಿ ಆಯೋಜಿಸಿದ್ದೇವೆ. ಮುಂಬರುವ ದಿನಗಳಲ್ಲಿ ಉದ್ಯೋಗ ಭರವಸೆ ಕೋಶದ ಮೂಲಕ ವಿದ್ಯಾರ್ಥಿಗಳಿಗೆ ಪ್ಲೇಸ್‌ಮೆಂಟ್ ದೊರಕಿಸುವ ಕಾರ್ಯ ಆಗಲಿದೆ ಎಂದು ಹೇಳಿದರು.

ವಿವಿಯ ಕುಲಪತಿ ಪ್ರೊ.ಎಂ ಮುನಿರಾಜು ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ಐಎಎಸ್, ಕೆಎಎಸ್, ಬ್ಯಾಂಕಿಂಗ್ ಪರೀಕ್ಷೆಗಳಿಗೆ ತಯಾರಿ ಹಾಗೂ ಉದ್ಯೋಗ ಕುರಿತು ಮಾರ್ಗದರ್ಶನದ ಅವಶ್ಯಕತೆಯಿದೆ. ವಿದ್ಯಾರ್ಥಿಗಳು ಉದ್ಯೋಗಾವಕಾಶಗಳನ್ನು ಪಡೆಯಲು ವಿಷಯ ತಜ್ಞರ ಜೊತೆ ಸಂವಾದ, ಉಪನ್ಯಾಸ, ವಿಚಾರಗೋಷ್ಠಿಗಳಲ್ಲಿ ಭಾಗವಹಿಸುವ ಮೂಲಕ ಪ್ರಯೋಜನ ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಇಂಡಿಯಾ4ಐಎಎಸ್ ಸಂಸ್ಥೆಯ ಸಿಬ್ಬಂದಿ ನಾಗರಾಜು, ವಿವಿಯ ಉದ್ಯೋಗ ಕೋಶದ ಸಂಯೋಜಕರಾದ ಡಾ.ಸುನೀಲ್ ಉಪಸ್ಥಿತರಿದ್ದರು.

ಎರಡು ದಿನಗಳ ಕಾರ್ಯಾಗಾರದಲ್ಲಿ ವಿವಿಯ ಪ್ರಾಧ್ಯಾಪಕರುಗಳು, ಕಾಲೇಜುಗಳ ಉಪನ್ಯಾಸಕರುಗಳು ಹಾಗೂ 200ಕ್ಕೂ ಹೆಚ್ಚು

ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ನಿಮ್ಮ ಹಣ ನಿಮ್ಮ ಹಕ್ಕು ವಿಶೇಷ ಕಾರ್ಯಕ್ರಮ

ಮಲ್ಲಮ್ಮನುಡಿವಾರ್ತೆಯಾದಗಿರಿ:

ಹಕ್ಕು ಪಡೆಯದ ಬ್ಯಾಂಕ್ ಠೇವಣಿಗಳನ್ನು ಕಾನೂನುಬದ್ಧ ವಾರಸುದಾರರಿಗೆ ಹಸ್ತಾಂತರಿಸುವದನ್ನು ಇದೇ 2025ರ ಡಿಸೆಂಬರ್ 12ರ ಶುಕ್ರವಾರ ರಂದು ಯಾದಗಿರಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಭಾರತೀಯ ಸ್ಟೇಟ್ ಬ್ಯಾಂಕ್ ಅಗ್ರಣೀಯ ಬ್ಯಾಂಕ್ (ಲೀಡ್ ಬ್ಯಾಂಕ) ವ್ಯವಸ್ಥಾಪಕರು ಸುನೀಲ್ ಸತ್ಯನಾರಾಯಣ ಬತ್ತಿನಿ ಅವರು ತಿಳಿಸಿದ್ದಾರೆ.

ದೀರ್ಘಕಾಲದಿಂದ ಹಕ್ಕು ಪಡೆ-ಯದೆ ಉಳಿದಿರುವ ಬ್ಯಾಂಕ್ ಠೇವಣಿಗಳು, ವಿಮಾ ಕಂತುಗಳು ಮತ್ತು ಷೇರುಗಳನ್ನು ಅವುಗಳ ಮಾಲೀಕರು ಅಥವಾ ಕಾನೂನುಬದ್ಧ ವಾರಸುದಾರರಿಗೆ ಹಸ್ತಾಂತರಿಸಲು ಈ ಶಿಬಿರವು ಭಾರತದ ಹಣಕಾಸು ಸಚಿವಾಲಯದ ಮಾರ್ಗಸೂಚಿಗಳ ಅನ್ವಯ ಎಲ್ಲಾ ಬ್ಯಾಂಕ್ ವಿಮಾ ಮತ್ತು ಇತರ ಇಲಾಖಾ ಶಾಖೆಗಳಲ್ಲಿ .2025ರ ಡಿಸೆಂಬರ್ 31ರ ವರೆಗೆ ನಡೆಯಲಿದೆ. ಅದರಂತೆ ದೀರ್ಘಕಾಲದವರೆಗೆ ಹಕ್ಕು ಪಡೆ-ಯದ ಹಣಕಾಸಿನ ಸ್ವತ್ತುಗಳನ್ನು ಕಾನೂನುಬದ್ಧ ವಾರಸುದಾರರಿಗೆ ಮರುಪಡೆಯಲು ಸಹಾಯ ಮಾಡಲು ಈ ಶಿಬಿರವನ್ನು ಯಾದಗಿರ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಯಲಿದೆ. ಬ್ಯಾಂಕಿನಲ್ಲಿ ಮುಂದಿನ ಹತ್ತು ವರ್ಷಗಳ ಕಾಲ ನಿಷ್ಕ್ರಿಯ ಖಾತೆಗಳಲ್ಲಿರುವ ಹಣ ಮತ್ತು ಹತ್ತು ವರ್ಷಗಳಿಗಿಂತ ಹಳೆಯದಾದ ಕ್ಲೈಮ್ ಮಾಡದ ಠೇವಣಿಗಳನ್ನು (ಮೊತ್ತಗಳು) ಆರ್‌ಬಿಐನ ಡಿಇಎ ನಿಧಿಗೆ ವರ್ಗಾಯಿಸಲಾಗುತ್ತದೆ.

ನಿಮ್ಮ ಬ್ಯಾಂಕಿನ ಯುಡಿಜಿಎಎಂ (https://udgam.rbi.org.in) ಅಥವಾ. ನೀವು ಅಥವಾ ನಿಮ್ಮ ಕಾನೂನುಬದ್ಧ ಉತ್ತರಾಧಿಕಾರಿಗಳು ಯಾವುದೇ ಸಮಯದಲ್ಲಿ ಅದನ್ನು ಬ್ಯಾಂಕ್‌ಗಳಿಗೆ ಭೇಟಿ ನೀಡಿ ಕ್ಲೈಮ್ ಮಾಡಬಹುದು. ಬ್ಯಾಂಕಿಂಗ್ ವಲಯ, ವಿಮಾ ವಲಯ, ಹಣಕಾಸು ವಲಯ, ಇತರ ವಲಯಗಳ ಅಧಿಕಾರಿಗಳು ಈ ಶಿಬಿರದಲ್ಲಿ ಭಾಗವಹಿಸಿ ಸಲಹೆ ನೀಡುತ್ತಾರೆ. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಮ್ಮ ಸಂಬಂಧಿತ ಗುರುತಿನ ದಾಖಲೆಗಳು, ಅರ್ಹತಾ ಪತ್ರಗಳೊಂದಿಗೆ ಶಿಬಿರದಲ್ಲಿ ಭಾಗವಹಿಸಿ ಅಗತ್ಯ ಸಲಹೆ ಮತ್ತು ಸೌಲಭ್ಯವನ್ನು ಪಡೆಯಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನಧಿಕೃತ ಸಂಗ್ರಹಿಸಿ ಆಟೋಗಳಿಗೆ ಹೆಚ್ಚಿನ ದರದಲ್ಲಿ ಫಿಲ್ಲಿಂಗ್ ಮಾಡುತ್ತಿದ್ದ ಅಡ್ಡೆ ಮೇಲೆ ದಾಳಿ




ಬಳ್ಳಾರಿ: ಗೃಹಬಳಕೆಯ ಸಿಲೆಂಡರ್ ಗಳನ್ನು ಅನಧಿಕೃತವಾಗಿ ಸಂಗ್ರಹಿಸಿ ಆಟೋಗಳಿಗೆ ಹೆಚ್ಚಿನ ದರದಲ್ಲಿ ಫಿಲ್ಲಿಂಗ್ ಮಾಡುತ್ತಿದ್ದ ಅಡ್ಡೆ ಮೇಲೆ ಆಹಾರ ಇಲಾಖೆ ಅಧಿಕಾರಿಗಳು ಬುಧವಾರ ದಾಳಿ ನಡೆಸಿ, 14 ಫಿಲ್ಲಿಂಗ್ ಸಿಲೆಂಡರ್ ಗಳು, 14ಖಾಲಿ ಸಿಲೆಂಡರ್ ಗಳು

ಹಾಗೂ 20 ಫಿಲ್ಲಿಂಗ್, 2 ರಿ ಫಿಲ್ಲಿಂಗ್ ಮಶೀನ್ ಗಳನ್ನು ವಶಕ್ಕೆ ಪಡೆದುಕೊಂಡಿದ್ದಾ-ರೆ. ಆರೋಪಕ್ಕೆ ಸಂಬಂಧಿಸಿ ಇಬ್ಬರನ್ನೂ ವಶಕ್ಕೆ ಪಡೆಯಲಾಗಿದ್ದು, ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸ್ಥಳೀಯ ಪ್ರಶಾಂತ್ ನಗರದಲ್ಲಿ ಬೆಳಗಲ್ ತಾಂಡಾದ ನಿವಾಸಿ ರಾಮಸ್ವಾಮಿ ನಾಯ್ಕ್ ಎನ್ನುವವರು ನಿವಾಸದಲ್ಲಿ ಅನಧಿಕೃತವಾಗಿ ಗೃಹಬಳಕೆಯ ಖಾಲಿ ಸಿಲೆಂಡರ್ ಗಳನ್ನು ಇಟ್ಟುಕೊಂಡು ಅವುಗಳನ್ನು ಮಶೀನ್ ಸಹಾಯದಿಂದ ಆಟೋಗಳಿಗೆ ರೀಫಿಲ್ಲಿಂಗ್ ಮಾಡಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಕುರಿತು ಖಚಿತ ಮಾಹಿತಿ ಮೇರೆಗೆ ಆಹಾರ ಸರಬರಾಜು ಮತ್ತು ಗ್ರಾಹಕರ ಇಲಾಖೆಯ ಉಪನಿರ್ದೇಶಕಿ ಸಕಿನಾ ಅವರ ಮಾರ್ಗದರ್ಶನದಲ್ಲಿ ಆಹಾರ ನಿರೀಕ್ಷಕ ಆದಿಶೇಷಲು ಅಂಬೇಡ್ಕರ್ ಅವರು ದಾಳಿ ನಡೆಸಿದ್ದಾರೆ.

ಈ ವೇಳೆ 14 ಫಿಲ್ಲಿಂಗ್ ಸಿಲೆಂಡರ್ ಗಳು, 14ಖಾಲಿ ಸಿಲೆಂಡರ್ ಗಳು ಹಾಗೂ 20 ಫಿಲ್ಲಿಂಗ್, 2 ರಿ ಫಿಲ್ಲಿಂಗ್ ಮಶೀನ್ ಗಳನ್ನು ವಶಕ್ಕೆ ಪಡೆದು-ಕೊಂಡಿದ್ದಾರೆ. ಆರೋಪಕ್ಕೆ ಸಂಬಂಧಿಸಿ ಇಬ್ಬರನ್ನೂ ಪೋಲೀಸ್ ರು ವಶಕ್ಕೆ ಪಡೆದಿದ್ದಾರೆ. ಪ್ರಕರಣ ಗ್ರಾಮೀಣ ಠಾಣೆಯಲ್ಲಿ ದಾಖಲಾಗಿದೆ.

# ಗಡಿನಾಶ ಆರೋಪ, ಸ್ಥಳಕ್ಕೆ ನಿವೃತ್ತ ನ್ಯಾಯಾಧಿಶ ಭೇಟಿ

ಮಲ್ಲಮ್ಮ ನುಡಿ ವಾರ್ತೆ



ಬಳ್ಳಾರಿ: ಕರ್ನಾಟಕ – ಆಂಧ್ರ ಗಡಿ ಭಾಗದಲ್ಲಿ ಅಕ್ರಮ ಗಣಿಗಾರಿಕೆಯಿಂದ ಗಡಿನಾಶ ಆರೋಪಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಸೂಚನೆಯಂತೆ ಆಂಧ್ರದ ಗಡಿಭಾಗದಲ್ಲಿ 6 ಮೈನಿಂಗ್ ಕಂಪನಿಗಳ ಲೀಜ್ ಬೌಂಡರಿಗಳ ಸರ್ವೆ ಕಾರ್ಯ ಸ್ಥಳಕ್ಕೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸುಧಾಂಶು ದುಲಿಯಾ ಹಾಗೂ ಕೇಂದ್ರದ ನಾನಾ ಇಲಾಖೆಯ ಅಧಿಕಾರಿಗಳ ತಂಡ ಬುಧವಾರ ಭೇಟಿ ನೀಡಿ ಪರಿಶೀಲಿಸಿತು. ನೆರೆಯ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಗಡಿಭಾಗದ ಗ್ರಾಮಗಳಲ್ಲಿ ಗಣಿಗಾರಿಕೆ ಲಿಸ್ ಗೆ ಪಡೆದಿದ್ದ ಮೈನಿಂಗ್ ಕಂಪನಿಗಳ ಬೌಂಡರಿಗಳನ್ನು ಸುಪ್ರೀಂ ಕೋರ್ಟ್ ಸೂಚನೆಯಂತೆ ಕಳೆದ ಒಂದು ತಿಂಗಳಿಂದ ಗಡಿಭಾಗದಲ್ಲಿ ಸರ್ವೇ ಮಾಡಲಾಗುತ್ತಿದೆ. ಈ ಪೈಕಿ ಮಲಪನಗುಡಿ ಗ್ರಾಮ ವ್ಯಾಪ್ತಿಯ ಅಂತರ ಗಂಗಮ್ಮ ಬೆಟ್ಟದಲ್ಲಿನ 68.50 ಹೆಕ್ಟೇರ್, ವೈ.ಮಹಾಬಲೇಶ್ವರಪ್ಪ ಸನ್ಸ್ ಕಂಪನಿಯ 20.24 ಹೆಕ್ಟೇರ್, ಸಿದ್ದಾಪುರಂ ಗ್ರಾಮದ ಬಿಐಒಪಿ 27.12 ಹೆಕ್ಟೇರ್, ಓಬಳಾಪುರಂ ವ್ಯಾಪ್ತಿಯ ಒಎಂಸಿ –1 ರಲ್ಲಿನ 25.98 ಹೆಕ್ಟೇರ್ ಹಾಗೂ ಒಎಂಸಿ –2 ರ 39.50 ಹೆಕ್ಟೇರ್ ಸೇರಿದಂತೆ ಒಟ್ಟು 187.84 ಹೆಕ್ಟೇರ್ ಪ್ರದೇಶದಲ್ಲಿ ಡ್ರೋನ್ ಮೂಲಕ ಸರ್ವೆ ಕಾರ್ಯ ನಡೆದಿದೆ. ಸ್ಥಳಕ್ಕೆ ನಿವೃತ್ತ ನ್ಯಾಯಾಧೀಶರು ಹಾಗೂ ಡಿಎಫ್ ಒ ಗುರು ಪ್ರಭಾಕರ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಪ ನಿರ್ದೇಶಕ ವೆಂಕಟೇಶ್ವರ ರಾವ್, ಸರ್ವೆ ಅಧಿಕಾರಿ ವೈ. ಜಯರಾಜ್ ಅವರು ಭೇಟಿ ನೀಡಿ ಸರ್ವೆ ಕಾರ್ಯದ ಪ್ರಗತಿಯನ್ನು ಸೇರಿದಂತೆ ನಾನಾ ಅಂಶಗಳ ಕುರಿತು ಪರಿಶೀಲಿಸಿ ಮಾಹಿತಿ ಪಡೆದರು.

# ಆಹಾರ ಸೇವನೆಯಿಂದ ಅಸ್ವಸ್ಥ ಆಸ್ಪತ್ರೆಗೆ ದಾಖಲಾಗಿರುವ ವಿದ್ಯಾರ್ಥಿನಿಯರು ಗುಣಮುಖ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :

ಜಿಲ್ಲೆಯ ಗುರುಮಠಕಲ್ ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯ ವಿದ್ಯಾರ್ಥಿಗಳು ಆಹಾರ ಸೇವನೆಯಿಂದ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿರುವ ವಿದ್ಯಾರ್ಥಿನಿಯರು ಗುಣಮುಖರಾಗಿವರು ಎಂದು ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕಿಯರ ವಸತಿ ನಿಲಯ ಗುರುಮಿಠಕಲ್ 2025ರ ಡಿಸೆಂಬರ್ 10 ರಂದು ರಾತ್ರಿ 7:30 ಗಂಟೆಗೆ ಸದರಿ ವಸತಿ ನಿಲಯದ ವಿದ್ಯಾರ್ಥಿನಿಯರು ರಾತ್ರಿ ಊಟದ ಸೇವನೆಯ ನಂತರ ಅಸ್ವಸ್ಥರಾಗಿ ರಾತ್ರಿ 9.30 ಗಂಟೆಗೆ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಯಾದಗಿರಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್ ಅವರು ಈ ವಿಷಯ ತಿಳಿದ ತಕ್ಷಣ 2025ರ ಡಿಸೆಂಬರ್ 10 ರಂದು ರಾತ್ರಿ 11 ಗಂಟೆಗೆ ಸಮುದಾಯ ಆರೋಗ್ಯ ಕೇಂದ್ರ ಗುರುಮಿಠಕಲ್‌ಗೆ ಭೇಟಿ ನೀಡಿ ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಿ ವಸತಿ ನಿಲಯದಲ್ಲಿ ಹಾಜರಿದ್ದ 100 ವಿದ್ಯಾರ್ಥಿನಿಯರಲ್ಲಿ ರಾತ್ರಿ ಊಟ ಸೇವನೆ ನಂತರ 23 ವಿದ್ಯಾರ್ಥಿನಿಯರಿಗೆ ಹೊಟ್ಟೆ ನೋವು ಮತ್ತು ವಾಂತಿಯಾಗಿರುವುದು ಕಂಡುಬಂದಿರುತ್ತದೆ.

ನಂತರ 23 ವಿದ್ಯಾರ್ಥಿನಿಯರ ಪೈಕಿ ನಾಲ್ಕು ವಿದ್ಯಾರ್ಥಿಗಳು ತೀವ್ರ ಅಸ್ವಸ್ಥಗೊಂಡಿರುವುದನ್ನು ಗಮನಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಶಸ್ತ್ರ ಚಿಕಿತ್ಸೆ ತಜ್ಞರಿಗೆ ಕರೆ ಮಾಡಿ ನಾಲ್ಕು ವಿದ್ಯಾರ್ಥಿನಿಯರನ್ನು ಜಿಲ್ಲಾ ಆಸ್ಪತ್ರೆ ಯಾದಗಿರಿಯಲ್ಲಿ ಹೆಚ್ಚಿನ ಚಿಕಿತ್ಸೆಗೆ ದಾಖಲೆ ಮಾಡಿಕೋಳ್ಳಲು ನಿರ್ದೇಶನ ನೀಡಿದರು. ಅದರಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಜಿಲ್ಲಾ ಶಸ್ತ್ರ ಚಿಕಿತ್ಸೆ ತಜ್ಞರು ಮತ್ತು ಇತರೆ ವ್ಯದ್ಯಾಧಿಕಾರಿಗಳು ಸದರಿ ನಾಲ್ಕು ವಿದ್ಯಾರ್ಥಿನಿಯರಿಗೆ ರಾತ್ರಿ 12 ಗಂಟೆಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದರು. ಕಲುಷಿತ ಆಹಾರ ಅಥವಾ ನೀರು ಸೇವನೆಯಿಂದ ವಾಂತಿ ಮತ್ತು ಹೊಟ್ಟೆ ನೋವು ಬಂದಿರಬಹುದೆಂದು ವ್ಯದ್ಯಾಧಿಕಾರಿಗಳು ತಿಳಿಸಿರುತ್ತಾರೆ. ವಸತಿ ನಿಲಯದಲ್ಲಿ ಸಿದ್ದಪಡಿಸಿದ ಚಿಕನ್, ಅನ್ನ, ಸೊಯಾಬಿನ್ ಪಲ್ಯ, ಟಮೋಟೊ ಪಲ್ಯಗಳ ಮತ್ತು ಕುಡಿಯುವ ನೀರು ಪರಿಶೀಲನೆಗಾಗಿ ಆಹಾರ ಸುರಕ್ಷತಾಧಿಕಾರಿಗಳಿಗೆ ಸ್ಯಾಂಪಲ್ ನೀಡಲಾಗಿರುತ್ತದೆ. ವೈದ್ಯಾಧಿಕಾರಿಗಳ ಸಲಹೆ ಮೇರೆಗೆ ಪ್ರಸ್ತುತ ಗುರುಮಿಠಕಲ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಾಖಲಾದ 19 ವಿದ್ಯಾರ್ಥಿನಿಯರು ಮತ್ತು ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾದ ನಾಲ್ಕು ವಿದ್ಯಾರ್ಥಿನಿಯರು ಆರೋಗ್ಯವಾಗಿರುವುದರಿಂದ ವಸತಿ ನಿಲಯಕ್ಕೆ ಕಳುಹಿಸಲಾಗಿರುತ್ತದೆ. ಸದರಿ ವಿಷಯದ ಕುರಿತು ವಿವರಣೆ ನೀಡಲು ಸದರಿ ವಸತಿ ನಿಲಯದ ನಿಲಯ ಮೇಲ್ವಿಚಾರಕರಾದ ಕುಮಾರಿ ಮಂಜುಳಾ ಇವರಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಯಾದಗಿರಿ ಇವರು ಕಾರಣ ಕೇಳುವ ನೋಟಿಸ್ ನೀಡಿರುತ್ತಾರೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾನವ ಹಕ್ಕುಗಳ ರಕ್ಷಣೆ ನಮ್ಮೆಲ್ಲರ ಹೊಣೆ: ಜಿಲ್ಲಾಧಿಕಾರಿ ಇಟ್ನಾಳ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ಮಾನವ ಹಕ್ಕುಗಳನ್ನು ಸಂರಕ್ಷಣೆ ಮಾಡುವಲ್ಲಿ ನಮ್ಮ ಮತ್ತು ನಿಮ್ಮ ಮೇಲೆ ಹೆಚ್ಚಿನ ರೀತಿಯ ಜವಾಬ್ದಾರಿಗಳು ಇವೆ. ಅದನ್ನು ಎಲ್ಲರೂ ಅರಿತು ಕೊಂಡು ಇನ್ನೂ ಹೆಚ್ಚಿನ ರಿತಿಯ ಕ್ರಮ ಕೈಗೊಳ್ಳುವುದರ ಜತೆಗೆ ಎಲ್ಲರೂ ಒಟ್ಟಾಗಿ ಮಾನವ ಹಕ್ಕುಗಳ ರಕ್ಷಣೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ.ಇಟ್ನಾಳ ಹೇಳಿದರು.

ಅವರು ಬುಧವಾರ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಪ್ಪಳ ಇವರುಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.

ನಮ್ಮ ದೇಶದಲ್ಲಿ ಸಂವಿಧಾನಾತ್ಮಕ ಹಕ್ಕು, ಶಾಸನಬದ್ಧ ಹಕ್ಕು ಹಾಗೂ ಖಾಸಗಿ ಹಕ್ಕು ಎನ್ನುವ ಮೂರು ಬಗೆಯ ಹಕ್ಕುಗಳಿವೆ. ಸಮಾನತೆಯ ಹಕ್ಕು, ಸಮಾನ ಕಾನೂನು ರಕ್ಷಣೆ, ಶೋಷಣೆ ವಿರುದ್ಧದ ಹಕ್ಕು, ಆರೋಗ್ಯಪೂರ್ಣ ಪರಿಸರದಲ್ಲಿ ಗೌರವಯುತ ಜೀವನ ನಡೆಸುವ ಹಕ್ಕು, ಕಲಿಕೆಯ ಹಕ್ಕು, ಭಾರತದ ಯಾವುದೇ ಸ್ಥಳಕ್ಕೆ ಹೋಗಲು ಮತ್ತು ಅಲ್ಲಿ ವಾಸಿಸುವ ಹಕ್ಕು, ಧಾರ್ಮಿಕ ಸಾತಂತ್ರ್ಯದ ಹಕ್ಕು, ಸಮಾನತೆಯ ಮತ್ತು ಸಂವಿಧಾನಾತ್ಮಕ ಪರಿಹಾರದ ಹಕ್ಕು ಸೇರಿ ಹಲವಾರು ಹಕ್ಕುಗಳು ನಮಗೆ ಸಂವಿಧಾನಬದ್ಧವಾಗಿ ಬಂದಿವೆ. ಹುಟ್ಟಿನಿಂದಲೇ ಎಲ್ಲರೂ ಮಾನವ ಹಕ್ಕುಗಳನ್ನು ಪಡೆದಿರುತ್ತಾರೆ. ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಹಕ್ಕುಗಳು ಎಷ್ಟು ಮುಖ್ಯವೋ ಅಷ್ಟೇ ಕರ್ತವ್ಯಗಳು ಕೂಡ ಬಹಳ ಮುಖ್ಯ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು ಎಂದರು.


ಹಾಗಾಗಿ ಸಂವಿಧಾನದ ಆಶಯಗಳನ್ನು ನಾವು ಸಿರಿಯಾದ ರೀತಿಯಲ್ಲಿ ಪಾಲನೆ ಮಾಡಬೇಕು ಎನ್ನುವ ಉದ್ದೇಶದಿಂದ ಈ ಒಂದು ಕಾರ್ಯಕ್ರಮವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.

ಕುಕನೂರು ತಾಲ್ಲೂಕಿನ ಮಂಗಳೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರು ಹಾಗೂ ಸಹ ಪ್ರಾಧ್ಯಾಪಕರಾದ ಡಾ.ಪ್ರಭುರಾಜ್ ನಾಯಕ ಅವರು ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕುರಿತು ಉಪನ್ಯಾಸ ನೀಡಿ, ಮಾನವ ಹಕ್ಕುಗಳು ಎಂದರೆ ಎಷ್ಟು ಸರಳವಾಗಿದೆ. ಆದರೆ, ಸರಳವಾಗಿರುವುದನ್ನು ಅಷ್ಟು ಸರಳವಾಗಿ ಸಾಮಾನ್ಯರಿಗೆ ಸಿಗಲು ಬಿಡುತ್ತಿಲ್ಲ. ಶುದ್ಧ ಗಾಳಿ ಮತ್ತು ನೀರು ಒಂದು ಮಾನವ ಹಕ್ಕಾಗಿದೆ. ಒಂದು ಶುದ್ಧ ಗಾಳಿ ನೂರು ಔಷಧಗಳಿಗೆ ಸಮ ಎನ್ನುವುದು ವಾಡಿಕೆ ಇದೆ. ಆದರೆ, ಇಂದು ಹಣ ಕೊಟ್ಟು ಬೆನ್ನು ಹಿಂದೆ ಗಾಳಿಯನ್ನು ಹೊತ್ತುಕೊಂಡು, ದುಡ್ಡು ಕೊಟ್ಟು ಬಾಟಲಿ ನೀರನ್ನು ಕುಡಿಯುವ ಸ್ಥಿತಿ ಬಂದಿದೆ. ಜಗತ್ತಿನಲ್ಲಿ ಮಾನವನಿಗೆ ಮಾನವ ಹಕ್ಕಾಗಿರುವ ಗಾಳಿ, ನೀರು ಸಿಗುತ್ತಿಲ್ಲ. ಆಹಾರದಲ್ಲಿ ಮಾಲಿನ್ಯತೆ ತುಂಬಿದೆ. ಕಲಬರಿಕೆ ಆಹಾರ ಸೇವನೆಯಿಂದ ಮಾನವನ ಜೀವಿತ ಅವದಿ ಕಡಿಮೆ ಯಾಗುತ್ತಿದೆ. ಒಟ್ಟಿನಲ್ಲಿ ಮಾನವ ಹಕ್ಕು ಎಂದರೆ, ಮನುಷ್ಯ ಹುಟ್ಟುವಾಗ ಯಾವ ರೀತಿಯಲ್ಲಿ ಸಹಜವಾಗಿ ಹುಟ್ಟುತ್ತಾನೆ, ಅದೇ ರೀತಿ ಸಹಜವಾಗಿ ಸಾಯುವತನಕ ಯಾವುದೇ ಸಮಸ್ಯೆ ಇಲ್ಲದೆ ಸುಖಮಯ ಜೀವನ ಸಾಗಿಸುವುದೇ ಮಾನವ ಹಕ್ಕು ಆಗಿದೆ ಎಂದು ಅವರು ಹೇಳಿದರು.

ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎ.ವಿ. ಕಣವಿ ಅವರು ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್.ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ್, ಯುನಿಸೆಫ್–ಮಕ್ಕಳ ರಕ್ಷಣಾ ಯೋಜನೆ ಕೊಪ್ಪಳದ ವ್ಯವಸ್ಥಾಪಕ ಹರೀಶ್ ಜೋಗಿ, ಕೊಪ್ಪಳ ತಹಶಿಲ್ದಾರ ವೀಠ್ಠಲ್ ಚೌಗಲಾ ಸೇರಿದಂತೆ ಇತರೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ವೈದ್ಯರ ನೇಮಿಸಿ ಉತ್ತಮ ಚಿಕಿತ್ಸೆ ನೀಡಿ: ವೈ.ಎಂ. ಸತೀಶ್ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ(ಬಿಎಂಸಿಆರ್‌ಸಿ) ದಲ್ಲಿ 288 ತಜ್ಞ ವೈದ್ಯರ ಹುದ್ದೆಗಳು, 858 ಸಿಬ್ಬಂದಿಗಳು ಮತ್ತು ದಂತ ಕಾಲೇಜಿನಲ್ಲಿ 23 ವೈದ್ಯರ ಹುದ್ದೆಗಳು ಖಾಲಿ ಇವೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾದ ಡಾ. ಶರಣ ಪ್ರಕಾಶ್ ಆರ್. ಪಾಟೀಲ್ ಅವರು ತಿಳಿಸಿದ್ದಾರೆ.

ಬಳ್ಳಾರಿ – ವಿಜಯನಗರ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿ, ವಿಧಾನಪರಿಷತ್ ಸದಸ್ಯ ವೈ.ಎಂ.ಸತೀಶ್ ಅವರು, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ನೀಡಲು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೋರಿ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದ್ದಾರೆ.

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ (ಬಿಎಂಸಿಆರ್‌ಸಿ) ಕ್ಕೆ ಒಟ್ಟು 450 ತಜ್ಞ ವೈದ್ಯರ ಹುದ್ದೆಗಳು ಮಂಜೂರಾಗಿದ್ದು, ಕೇವಲ 162 ಹುದ್ದೆಗಳು ಮಾತ್ರ ಭರ್ತಿಯಾಗಿವೆ. 1,071 ಇತರೆ ಸಿಬ್ಬಂದಿಯ ಹುದ್ದೆಗಳು ಮಂಜೂರಾಗಿದ್ದು, 213 ಮಾತ್ರ ನೇಮಕಗೊಂಡಿವೆ. ಮುಂದಿನ ಐದು ವರ್ಷಗಳಲ್ಲಿ 32 ತಜ್ಞ ವೈದ್ಯರು, 31 ಇತರೆ ಸಿಬ್ಬಂದಿ ಸೇವಾ ನಿವೃತ್ತಿ ಹೊಂದಲಿದ್ದಾರೆ. ಡೆಂಟಲ್ ಕಾಲೇಜಿನಲ್ಲಿ 47 ವೈದ್ಯರ ಹುದ್ದೆಗಳು ಮಂಜೂರಾಗಿದ್ದು, 24 ಮಾತ್ರ ನೇಮಕಗೊಂಡಿವೆ ಎಂದರು.

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ (ಬಿಎಂಸಿಆರ್‌ಸಿ) ದಲ್ಲಿ ಎನ್‌ಎಂಸಿ ಮತ್ತು ಡೆಂಟಲ್ ಕಾಲೇಜಿನಲ್ಲಿ ಡಿಸಿ (ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ) ನಿಯಮಗಳ ಪ್ರಕಾರ ಒಳ ಮೀಸಲಾತಿ ವಿವಾದ ಇತ್ಯರ್ಥವಾದ ನಂತರ ವೈದ್ಯರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ ಎಂದು ಉತ್ತರಿಸಿದರು.

ಬಿಟಿಪಿಎಸ್ ಭೂ ಸಂತ್ರಸ್ತರ ಪರ: ವೈ.ಎಂ. ಸತೀಶ್

ಬಳ್ಳಾರಿ ಥರ್ಮಲ್ ಪವರ್ ಪ್ಲಾಂಟ್‌ಗಾಗಿ 1,800.92 ಎಕರೆ ಭೂಮಿಯನ್ನು ಸ್ವಾಧೀನ ಪಡೆದುಕೊಳ್ಳಲಾಗಿದೆ. ಭೂ ಸಂತ್ರಸ್ತರಿಗೆ ಪರಿಹಾರ ನೀಡಲಾಗಿದ್ದರೂ, ಉದ್ಯೋಗ ನೀಡುವಲ್ಲಿ ಸೂಕ್ತ ಕ್ರಮ ಕೈಗೊಂಡಿಲ್ಲ. ಕಾರಣ ಸರ್ಕಾರ ಬಿಟಿಪಿಎಸ್‌ನ ಭೂ ಸಂತ್ರಸ್ತರಿಗೆ ತಪ್ಪದೇ ಉದ್ಯೋಗ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯರು ಆಗ್ರಹಿಸಿದರು.

ಇಂಧನ ಸಚಿವ ಕೆ.ಜೆ.ಜಾರ್ಜ್ ಅವರು, ಭೂ ಸಂತ್ರಸ್ತ 293 ಕುಟುಂಬಗಳಲ್ಲಿ 169 ಅಭ್ಯರ್ಥಿಗಳಿಗೆ ಅರ್ಹತೆ ಆಧರಿಸಿ ತರಬೇತಿ ಮತ್ತು ಉದ್ಯೋಗ ನೀಡಲಾಗಿದೆ. ಉಳಿದ 124 ಸಂತ್ರಸ್ತ ಕುಟುಂಬಗಳ ಪೈಕಿ ಕೆಲವು ನ್ಯಾಯಾಲಯ ಇನ್ನಿತರೆ ಕಾರಣಗಳಿಗಾಗಿ ವಿಳಂಬವಾಗುತ್ತಿದೆ ಎಂದು ಉತ್ತರಿಸಿದರು.

## ಸಭಾಧ್ಯಕ್ಷ ಯು.ಟಿ.ಖಾದರ್ ಫರೀದ್ ಅವರ ಜಿಲ್ಲಾ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಕರ್ನಾಟಕ ವಿಧಾನಸಭೆ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಅವರು ಡಿ.14 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಅಂದು ಬೆಳಿಗ್ಗೆ 09.50 ಗಂಟೆಗೆ ಬೆಂಗಳೂರಿನಿಂದ ಹೊರಟು, ಬೆಳಿಗ್ಗೆ 10.40 ಕ್ಕೆ ಸಂಡೂರಿನ ತೋರಣಗಲ್ಲಿನ ಜಿಂದಾಲ್ ಏರ್‌ಪೋರ್ಟ್ ಗೆ ಆಗಮಿಸಿ, ಜಿಂದಾಲ್ ಗೆಸ್ಟ್ ಹೌಸ್ ನಲ್ಲಿ ವಾಸ್ತವ್ಯ ಮಾಡುವರು.

ಬಳಿಕ ಮಧ್ಯಾಹ್ನ 03 ಗಂಟೆಗೆ ಅಲ್ಲಿಂದ ಹೊರಟು ಸಂಜೆ 04 ಗಂಟೆಗೆ ಕುರುಗೋಡು ಪಟ್ಟಣಕ್ಕೆ ಆಗಮಿಸುವರು. ಪಟ್ಟಣದಲ್ಲಿ ಏರ್ಪಡಿಸಿರುವ 4ನೇ ಉರ್ಸ್–ಎ–ಷರೀಫ್ ಹಜರತ್ ಖ್ವಾಜಾ ಸೈಯದ್ ಶಾ ಸಾಹಿಬ್ ಪೀರ್ ಥೇರ್ ಉರ್ಸ್–ಎ·ರೀಫ್ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಸಂಜೆ 05 ಗಂಟೆಗೆ ಧಾರವಾಡಕ್ಕೆ ಪ್ರಯಾಣಿಸುವರು ಎಂದು ಆಪ್ತ ಕಾರ್ಯದರ್ಶಿಯವರು ತಿಳಿಸಿದ್ದಾರೆ.

# ಕೊಪ್ಪಳ ಶಾಂತತೆ ಕದಡಿದರೆ ಎಚ್ಚರ: ಸುರೇಶ ಪೂಜಾರ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ನಾವು ಕಾಲಕಾಲದಿಂದಲೂ ಇಲ್ಲಿನ ಕೃಷಿ, ಭಾಗ್ಯನಗರದ ಗುಡಿ ಕೈಗಾರಿಕೆಗಳನ್ನು ನಂಬಿಕೊಂಡು, ತುಂಗಭದ್ರಾ ಹಿನ್ನೀರಿನ ಅಂತರ್ಜಲ ನಂಬಿಕೊಂಡು ಜೀವನ ಕಟ್ಟಿಕೊಂಡಿದ್ದೇವೆ. ಆದರೆ ಇತ್ತೀಚಿಗೆ ಮೂರು ದೇಶಕಗಳಿಂದ ಬಂದ ಧನದಾಹಿ ಕಾರ್ಖಾನೆಗಳು ನಮ್ಮ ಬದುಕನ್ನೇ ಮೂರಾಬಟ್ಟೆ ಮಾಡಿವೆ ಎಂದು ಎಂದು ದದೇಗಲ್ ಗ್ರಾಮದ ನಿವೃತ್ತ ಪಿಡಿಓ ಗೋವಿಂದಪ್ಪ ಬಂಡಿ ಹೇಳಿದರು.

ಅವರು ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ಕೊಪ್ಪಳ ಪಕ್ಕದಲ್ಲಿ ಬಲ್ಡೋಟಾ (ಬಿಎಸ್ಪಿಎಲ್), ಕಿರ್ಲೋಸ್ಕರ್, ಕಲ್ಯಾಣಿ ಸ್ಟೀಲ್, ಮುಕುಂದ–ಸುಮಿ, ಎಕ್ಸ್ ಇಂಡಿಯಾ ಮಾಲಿನ್ಯಕಾರಕ ಕಾರ್ಖಾನೆಗಳ ವಿಸ್ತರಣೆ ಬೇಡ, ಬಸಾಪುರ ಕೆರೆ ಸಾರ್ವಜನಿಕರಿಗೆ ಮುಕ್ತಗೊಳಿಸಿ 41ನೇ ದಿನದ ಧರಣಿ ಬೆಂಬಲಿಸಿ ಮಾತನಾಡಿದರು. ಹೀಗೆ ಆದರೆ ನಮ್ಮ ಮೊಮ್ಮಕ್ಕಳ ಗತಿ ಏನು? ಅವರ ಭವಿಷ್ಯದ ಮೇಲೆ ಕರಿನೆರಳು ಬಿದ್ದಿದೆ. ಎಷ್ಟೇ ಹಣವಿದ್ದರೂ ಆರೋಗ್ಯ ಇಲ್ಲದ ಮೇಲೆ ಅದನ್ನು ಅನಭವಿಸಲು ಜೀವ ಬೇಕಲ್ಲವೇ? ಕೃಷಿ ಬದುಕನ್ನೇ ನಂಬಿಕೊಂಡು ಬದುಕಿದರೆ ಸುಸ್ಥಿರವಾಗಿ ಬದುಕಬಹುದು. ಕಾರ್ಖಾನೆಗಳಿಂದ ನಾವು ಪಶ್ಚಿಮ ದಿಕ್ಕಿನಲ್ಲಿದ್ದು ದೂರವಿದ್ದೇವೆ ಎಂದರೆ ಸರಿಯಲ್ಲ. ಈಗ ನಮಗೂ ಕೂಡ ಸಣ್ಣದಾಗಿ ದೂಳು ಹೊಗೆ ಆವರಿಸುತ್ತಿದೆ. ದದೇಗಲ್ ಕೊಪ್ಪಳದಿಂದ ಕೇವಲ ಒಂದು ಕಿಲೋ ಮೀಟರ್ ದೂರವಿದೆ. ಭಾಗ್ಯನಗರಕ್ಕೆ ಆವರಿಸಿದ ದೂಳು ನಮಗೂ ಬಿಡುತ್ತದೆಯೇ?. ಗವಿಶ್ರೀಗಳ ನೇತೃತ್ವದ ಹೋರಾಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದೇವೆ. ತುಂಗಭದ್ರಾ ಮಾಲಿನ್ಯ ಮಾಡುವ ಕಾರ್ಖಾನೆಗಳನ್ನು ಸೀಜ್ ಮಾಡಿ, ಮುಖ್ಯಮಂತ್ರಿ ಬಾಧಿತ ಹಳ್ಳಿಗೆ ಭೇಟಿಗಾಗಿ ಆಗ್ರಹಿಸಿ ನಡೆಸುತ್ತಿರುವ ಅನಿರ್ದಿಷ್ಟ ಧರಣಿಗೆ ದದೇಗಲ್ ಶ್ರೀ ಮಾರುತೇಶ್ವರ ಸೇವಾ ಸಮಿತಿ ಬೆಂಬಲಿಸಿತು. ದದೇಗಲ್ ಗ್ರಾಮದ ಯುವ ಮುಖಂಡ ಸುರೇಶ್ ಪೂಜಾರ್ ಮಾತನಾಡಿ ಕೊಪ್ಪಳ ತಾಲೂಕು ಕಾಲಕಾಲದಿಂದಲೂ ಶಾಂತವಾದ ಜೀವನ ನಡೆಸುತ್ತಾ ತನ್ನ ಅಭಿವೃದ್ಧಿಯನ್ನು ಇಲ್ಲಿನ ಪರಿಸರದ ಸಂಪನ್ಮೂಲಗಳನ್ನು ಅವಲಂಬಿಸಿಕೊಂಡು ಜೀವನ ಕಟ್ಟಿ–ಕೊಂಡಿದೆ. ಈ ಶಾಂತತೆಯನ್ನು ಕದಡಿ, ಇಲ್ಲಿನ ಆರಾಧ್ಯ ದೈವ ಶ್ರೀ ಗವಿಸಿದ್ದೇಶ್ವರರ ಶಕ್ತಿಪೀಠ ಇದ್ದರು ಅದನ್ನು ಸಹಿತ ಲೆಕ್ಕಿಸದೆ, ಒಂದುವರೆ ಲಕ್ಷ ಜನರ ಬದುಕು ಆರೋಗ್ಯ ಕೆಡಿಸುತ್ತೇನೆಂದರೆ ಇಲ್ಲಿನ ರಾಜಕಾರಣಿಗಳ ಕಣ್ಣು ಕುರುಡಾಗಿ, ಕಿವಿ ಕಿವುಡಾಗಿ, ಮೂಕರಾಗಿ, ನಡೆದುಕೊಳ್ಳುತ್ತಿರುವುದು ಯಾರ ಉದ್ದಾರಕ್ಕಾಗಿ? ಕಳೆದ ಮೂರು ದಿನಗಳಿಂದ ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಎಲ್ಲಾ ಪಕ್ಷದವರು ಮೌನವಹಿಸಿದ್ದಾರೆ. ಜನ ಬೀದಿಗೆ ಇಳಿಯುವುದು ಉಳಿದಿರುವ ಏಕೈಕ ಮಾರ್ಗ ಎಂದರು.

ಧರಣಿ ಸತ್ಯಾಗ್ರಹದಲ್ಲಿ ಜಿಲ್ಲಾ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಸಿ.ವಿ. ಜಡಿಯವರ್, ಜಂಟಿ ಕ್ರಿಯಾ ವೇದಿಕೆ ಸಂಚಾಲಕ ಮಲ್ಲಿಕಾರ್ಜುನ ಗೋನಾಳ, ನಿವೃತ್ತ ಬಿಎಸ್‌ಎನ್‌ಎಲ್ ಅಧಿಕಾರಿ ಹನುಮಂತಪ್ಪ ಗೊಂದಿ, ನಿವೃತ್ತ ಕಾರ್ಮಿಕ ಅಧಿಕಾರಿ ಶಾಂತಯ್ಯ ಅಂಗಡಿ, ನಿವೃತ್ತ ಪ್ರಿನ್ಸಿಪಾಲ ಎಸ್.ಬಿ.ರಾಜೂರು, ನಿವೃತ್ತ ಅಂಚೆ ಅಧಿಕಾರಿ ರವಿ ಕಾಂತನವರ, ನಿವೃತ್ತ ಉಪನ್ಯಾಸಕ ಶಂಭುಲಿಂಗಪ್ಪ ಹರಗೇರಿ, ವೇದಿಕೆ ಸಂಚಾಲಕ ಮಂಜುನಾಥ ಜಿ. ಗೊಂಡಬಾಳ, ಬಸವರಾಜ ಶೀಲವಂತರ, ಕಲ್ಲಮ್ಮ ಮೆತಗಲ್, ದದೇಗಲ್ ಶ್ರೀ ಮಾರುತೇಶ್ವರ ಸೇವಾ ಸಮಿತಿಯ ಹೊಟ್ಟೆಪ್ಪ ಮೂಗಿನ್, ಹನುಮಂತಪ್ಪ ಹಳ್ಳಿಕೇರಿ, ಶಿವಪ್ಪ ಮೈನಹಳ್ಳಿ, ಮಾರುತಿ ತಳವಾರ, ಬಸಪ್ಪ ಪೈಲ್ವಾನ್, ವಿಕ್ರಂ ಎಂ ಪೂಜಾರ್, ಹನುಮಂತಪ್ಪ ಲಂಕಿ, ಜ್ಯೋತಿ ಬಸು, ಮಂಜುನಾಥ ಪ್ರಸಾದ್, ದೇವಪ್ಪ ಕುದುರೆಮೋತಿ, ಶರಣು ಗಡ್ಡಿ, ರಾಯಚೂರು, ಶಿವಪ್ಪ ಹಡಪದ, ಮಹಾದೇವಪ್ಪ ಮಾವಿನಮಡು ಇತರರಿದ್ದರು.



ಬಳ್ಳಾರಿ .ನವದೆಹಲಿಯಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಕರ್ನಾಟಕದ ಸಂಸದರ ನಿಯೋಗದೊಂದಿಗೆ ತೆರಳಿ ರಾಷ್ಟ್ರೀಯ ಕೃಷಿ ಸಹಕಾರಿ ಹಾಗೂ ಗ್ರಾಹಕರ ಒಕ್ಕೂಟದ ಮೂಲಕ ಕರ್ನಾಟಕ ರಾಜ್ಯದಲ್ಲಿ ಬೆಳೆದ ಮೆಕ್ಕೆಜೋಳ,ತೊಗರಿಬೇಳೆ ಹಾಗೂ ಕಬ್ಬು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗಧಿಗೆ ಕೂಡಲೇ ಅನುಮೋದನೆ ನೀಡಬೇಕೆಂದು ಮನವಿ ಮಾಡಲಾಯಿತು. ಸಚಿವರು ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದರು.ನಿಯೋಗದಲ್ಲಿ ಸಂಸದರುಗಳಾದ ಜಿ.ಕುಮಾರ್ ನಾಯಕ್ ಡಾ. ಪ್ರಭಾ ಮಲ್ಲಿಕಾರ್ಜುನ , ಶ್ರೇಯಸ್ ಪಟೇಲ್, ಸುನೀಲ್ ಬೋಸ್, ಸಾಗರ್ ಖಂಡ್ರೆ ಅವರುಗಳು ಉಪಸ್ಥಿತರಿದ್ದರು.

## ಚನ್ನಬಸವೇಶ್ವರ ಜಯಂತ್ಯುತ್ಸವ ಪೂರ್ವಭಾವಿ ಸಭೆ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ: ಭಾರತಕ್ಕೆ ಸ್ವಾತಂತ್ರ ಸಿಕ್ಕರೂ ಈ ಭಾಗವು ನಿಜಾಮನ ಆಡಳಿತದಲ್ಲಿ ನರಳುತ್ತಲಿತ್ತು. ಇಂತಹ ಸಂದರ್ಭದಲ್ಲಿ ಹೊರಗಡೆ ಉರ್ದು ಬೋರ್ಡ ಹಾಕಿ ಒಳಗಡೆ ಕನ್ನಡ ಕಲಿಸಿ, ಈ ಭಾಗವನ್ನು ಕರ್ನಾಟಕದಲ್ಲಿ ಉಳಿಯುವಂತೆ ಮಾಡಿದ ಲಿಂ.ಡಾ।ಚನ್ನಬಸವ ಪಟ್ಟದ್ದೇವರ 136ನೇ ಜಯಂತ್ಯುತ್ಸವ ಅತ್ಯಂತ ಭಾವಪೂರ್ಣವಾಗಿ ಆಚರಿಸಲಾಗುವುದು ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಪ್ರತಿಪಾದಿಸಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಗುರುವಾರ ನಡೆದ ಲಿಂ.ಡಾ। ಚನ್ನಬಸವ ಪಟ್ಟದ್ದೇವರ 136ನೇ ಜಯಂತಿ ಮಹೋತ್ಸವ ಪೂರ್ವಭಾವಿ ಸಭೆಯ ಸಾನಿಧ್ಯವಹಿಸಿ ಅವರು ಮಾತನಾಡಿದರು. ಪೂಜ್ಯರ ಜಯಂತಿ ಮಹೋತ್ಸವ ಅಂಗವಾಗಿ ಡಿ.12 ರಂದು ಪೂಜ್ಯರ ಹುಟ್ಟೂರಾದ ಕಮಲನಗರದಿಂದ ಬಸವಜ್ಯೋತಿ ಪಾದಯಾತ್ರೆ ನಡೆಯಲಿದೆ. ಪಾದಯಾತ್ರೆಯು ಡಿ.13 ರಂದು ಭಾಲ್ಕಿಗೆ ಬಂದು ಸೇರುವುದು. ಡಿ.14 ರಂದು ಶ್ರೀ ಪ್ರಭುಲಿಂಗ ಮಹಾಸ್ವಾಮಿಗಳಿಂದ ವಚನ ದರ್ಶನ ಪ್ರವಚನ ಆರಂಭವಾಗುವುದು. ಡಿ.21 ರ ವರೆಗೆ ಪಟ್ಟಣದ ಚನ್ನಬಸವಾಶ್ರಮದಲ್ಲಿ ಪ್ರತಿದಿನ ಸಾಯಂಕಾಲ 5.30 ರಿಂದ 6.30 ರವರೆಗೆ ಪ್ರವಚನ ನಡೆಯುವುದು. ಪ್ರವಚನ ಸಮಿತಿಯ ಅಧ್ಯಕ್ಷರಾಗಿ ಬಸವತತ್ವ ನಿಷ್ಠರಾದ ಶಿವಕುಮಾರ ಕಮಠಾಣೆಯವರಿಗೆ ನೇಮಿಸಲಾಗಿದೆ ಎಂದರು. ಡಿ.22 ರಂದು ಪೂಜ್ಯರ ಜಯಂತ್ಯುತ್ಸವ ನಿಮಿತ್ಯ ಬೆಳಿಗ್ಗೆ 6 ಗಂಟೆಗೆ ಹಿರೇಮಠ ಸಂಸ್ಥಾನದಿಂದ ಚನ್ನಬಸವಾಶ್ರಮದ ವರೆಗೆ ಬಸವ ನಡಿಗೆ ನಡೆಸಲಾಗುವುದು. ಬೆಳಿಗ್ಗೆ 7 ಗಂಟೆಗೆ ಷಟಸ್ಥಳ ಧ್ವಜಾರೋಹಣ ನಡೆಯುವುದು. ನಂತರ ಬೆಳಿಗ್ಗೆ 10 ಗಂಟೆಗೆ ಶರಣರ ಕುರಿತು ಜನಪದ, ಭಕ್ತಿಗೀತೆ, ಭಾವಗೀತೆ, ಭಾಷಣ ಸ್ಪರ್ಧೆಗಳು ನಡೆಯುವವು. ಭಾಷಣ ಸ್ಪರ್ಧೆಯಲ್ಲಿ ಡಾ।ಚನ್ನಬಸವ ಪಟ್ಟದ್ದೇವರ ಜೀವನ ಸಾಧನೆ ವಿಷಯವಾಗಿ ಭಾಷಣ ನಡೆಸಲಾಗುವುದು. ಸಾಯಂಕಾಲ 5 ಗಂಟೆಯವರೆಗೆ ಎಲ್ಲಾ ಸ್ಪರ್ಧೆಗಳು ಮುಗಿದು, ವೇದಿಕೆಯ ಮೇಲೆ ನಡೆಯುವ ಪೂಜ್ಯರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರ ವಿತರಿಸಲಾಗುವುದು. ಇದೇವೇಳೆ ಡಿ.14 ರಿಂದ ನಡೆಯುವ ವಚನ ದರ್ಶನ ಪ್ರವಚನ ಕಾರ್ಯಕ್ರಮ ಸಮಿತಿಯ ಅಧ್ಯಕ್ಷರಾಗಿ ನೇಮಕವಾದ ಶಿವಕುಮಾರ ಕಮಠಾಣೆಯವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಪ್ರಭುಲಿಂಗ ಸ್ವಾಮೀಜಿ, ಪ್ರಮುಖರಾದ ನಿವೃತ್ತ ಅಭಿಯಂತರ ವಿಶ್ವನಾಥಪ್ಪ,ಬಸವರಾಜ ಮರೆ,ಚಂದ್ರಕಾಂತ ಪಾಟೀಲ,ಶಿವಾನಂದ ಗುಂದಗೆ, ಜಯರಾಜ ದಾಬಶೆಟ್ಟಿ, ಸಾಹಿತಿ ರಾಜು ಜುಬರೆ, ನಾಗಶೆಟ್ಟಿ ಚೋಳಾ, ಶಿಖರೇಶ್ವರ ಶಟಕಾರ, ಶಂಭುಲಿಂಗ ಕಾಮಣ್ಣ, ಮಲ್ಲಮ್ಮಾ ಆರ್ ಪಾಟೀಲ, ಮಹಾನಂದಾ ಮಾಶೆಟ್ಟೆ ಉಪಸ್ಥಿತರಿದ್ದರು.

ಬಾಕ್ಸ್.

ಡಾ।ಚನ್ನಬಸವ ಪಟ್ಟದ್ದೇವರ ಜಯಂತ್ಯುತ್ಸವ ನಿಮಿತ್ಯ ನಡೆಯುವ ಭಾಷಣ,ಜನಪದ,ಭಕ್ತಿಗೀತೆ,ಭಾವಗೀತೆ ಸ್ಪರ್ಧೆಗಳಿಗೆ ನಿರ್ಣಾಯಕರಾಗಿ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಪ್ರೊ। ಶಂಭುಲಿಂಗ ಕಾಮಣ್ಣ, ಕಸಾಪ ರಾಜ್ಯಪರಿಷತ್ ಸದಸ್ಯೆ ಪ್ರೊ। ಮಲ್ಲಮ್ಮಾ ಆರ್ ಪಾಟೀಲ, ಬಂಡೆಪ್ಪ ಶರಣರು, ರಾಜಕುಮಾರ ಸಾಲಿಮಠ ರವರನ್ನು ನೇಮಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಿಗೆ ಅಂದೇ ವೇದಿಕೆಯಮೇಲೆ ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಿಸಲಾಗುವುದು.

# ಯಂತ್ರೋಪಕರಣ ಒದಗಿಸಲು ಅನುದಾನ: ಡಾ. ಶರಣಪ್ರಕಾಶ್ ಪಾಟೀಲ

ಬಳ್ಳಾರಿ : ಬೆಳಗಾವಿ ಸುವರ್ಣ ವಿಧಾನಸೌಧ ರಾಜ್ಯದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಪರಿಷ್ಕೃತ ಪಠ್ಯಕ್ರಮದ ಅನುಸಾರ ಯಂತ್ರೋಪಕರಣಗಳನ್ನು ಖರೀದಿಸಿ ಒದಗಿಸಲು 50 ಕೋಟಿ ರೂ. ಅನುದಾನ ಒದಗಿಸಿದ್ದು, ಈಗಾಗಲೆ ಟೆಂಡರ್ ಪ್ರಕ್ರಿಯೆ ನಡೆದಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಹೇಳಿದರು.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ವಿಧಾನಮಂಡಲದ ಅಧಿವೇಶನದಲ್ಲಿ ವಿಧಾನಸಭೆಯ ಪ್ರಶ್ನೋತ್ತರ ಕಲಾಪದಲ್ಲಿ ಗುರುವಾರ ಅವರು ಮಾತನಾಡಿದರು.

ಸಿರಗುಪ್ಪ ಶಾಸಕ ನಾಗರಾಜ್ ಬಿ.ಎಂ. ಅವರ ಚುಕ್ಕೆ ಗುರುತಿನ ಪ್ರಶ್ನೆಯಲ್ಲಿ ಸಿರಗುಪ್ಪ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಐಟಿಐ ಅನ್ನು 2014–15 ರಲ್ಲಿ ಮಂಜೂರು ಮಾಡಿದ್ದು, ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಬೇಕಾಗಿರುವ ಉಪಕರಣಗಳು ಲಭ್ಯವಿಲ್ಲದೆ ತೊಂದರೆಯಾಗಿದೆ ಎಂಬುದಾಗಿ ಸರ್ಕಾರದ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್, ರಾಜ್ಯದ 90 ಸರ್ಕಾರಿ ಐಟಿಐ ಗಳಲ್ಲಿ ಡಿ.ಜಿ.ಟಿ. ನವದೆಹಲಿ ಅವರ ಪರಿಷ್ಕೃತ ಪಠ್ಯಕ್ರಮದ ಅನುಸಾರ ಅಗತ್ಯವಿರುವ ಯಂತ್ರೋಪಕರಣಗಳನ್ನು ಒದಗಿಸಲು ಈಗಾಗಲೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಸಿರಗುಪ್ಪದ ಸರ್ಕಾರಿ ಐಟಿಐ ಸಂಸ್ಥೆಗೂ ಕೂಡ ಹೊಸದಾಗಿ ಅಗತ್ಯ ಯಂತ್ರೋಪಕರಣಗಳನ್ನು ಖರೀದಿಸಿ, ಒದಗಿಸಲಾಗುವುದು ಎಂದು ಸಚಿವ ಶರಣ ಪ್ರಕಾಶ್ ಪಾಟೀಲ್ ಹೇಳಿದರು.

## ರಜಪೂತ ಅವಿರೋಧ ಆಯ್ಕೆ



ತಾಳಿಕೋಟಿ: ತಾಲೂಕಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರಾಗಿ ಸಂಜಯಸಿಂಗ್ ರಜಪೂತ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬುಧವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಜರುಗಿದ ಕಾನಿಪ ತಾಲೂಕ ಸಂಘದ ನೂತನ ಪದಾಧಿಕಾರಿಗಳ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯಲ್ಲಿ ಅವರ ಈ ಅವಿರೋಧ ಆಯ್ಕೆ ನಡೆದಿದೆ. ಪಟ್ಟಣದ ಉದಯೋನ್ಮುಖ ಪತ್ರಕರ್ತರಾದ ಸಂಜಯಸಿಂಗ್ ರಜಪೂತ ಅವರು ಕಳೆದ ಹತ್ತು ವರ್ಷಗಳಿಂದ ಮಾಧ್ಯಮ ಕ್ಷೇತ್ರದಲ್ಲಿ ಕ್ರಿಯಾಶೀಲತೆಯೊಂದಿಗೆ ಕಾರ್ಯನಿರ್ವಹಿಸುತ್ತಿದ್ದು ಪ್ರಸಕ್ತ ಅವರು ಲೋಕದರ್ಶನ ಪ್ರಾದೇಶಿಕ ದಿನಪತ್ರಿಕೆಯ ತಾಲೂಕ ವರದಿಗಾರರಾಗಿದ್ದಾರೆ. ಅಭಿನಂದನೆ: ಪತ್ರಕರ್ತ ಸಂಜಯಸಿಂಗ್ ರಜಪೂತ ಇವರನ್ನು ತಾಳಿಕೋಟಿ ತಾಲೂಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿರುವದಕ್ಕೆ ಸ್ಥಳೀಯ ರಜಪೂತ ಸಮಾಜದ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಹರ್ಷ ವ್ಯಕ್ತಪಡಿಸಿ ಅವರನ್ನು ಅಭಿನಂದಿಸಿದ್ದಾರೆ.

## ವಿಭಾಗೀಯ ಕಚೇರಿ ಉದ್ಘಾಟನಾ ಸಮಾರಂಭ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನೂತನ ಕಾನೂನು ಅಧಿಕಾರಿ (ಹಿರಿಯ) ಯವರ ಬಳ್ಳಾರಿ ವಿಭಾಗೀಯ ಕಚೇರಿಯ ಉದ್ಘಾಟನಾ ಸಮಾರಂಭ ಕಾರ್ಯಕ್ರಮವನ್ನು ಡಿ.13 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹಳೆಯ ನ್ಯಾಯಾಲಯ ಆವರಣದ ಅಭಿಯೋಜಕ ಭವನ ದಲ್ಲಿ ಏರ್ಪಡಿಸಲಾಗಿದೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ ಅವರು ನೂತನ ಕಚೇರಿಯ ಉದ್ಘಾಟನೆ ನೆರವೇರಿಸುವರು. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹಾಗೂ ಪ್ರವಾಸೋದ್ಯಮ ಸಚಿವ ಡಾ.ಎಚ್.ಕೆ ಪಾಟೀಲ್ ಅವರು 'ನೊಂದವರಿಗೆ ನ್ಯಾಯ' ಜಾಗೃತಿ ಅಭಿಯಾನ ಉದ್ಘಾಟಿಸುವರು.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜಡ್ ಜಮೀರ್ ಅಹ್ಮದ್ ಖಾನ್ ಅವರು 'ನ್ಯಾಯ ಜ್ಯೋತಿ' ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಮಾಜಿ ಸಚಿವರು ಹಾಗೂ ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಅವರು ವಿಭಾಗೀಯ ಕಚೇರಿಯ ವೆಬ್ ಸೈಟ್ ಗೆ ಚಾಲನೆ ನೀಡಿವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಸಂಸದರಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಜೆ.ಎನ್. ಗಣೇಶ್, ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಬಳ್ಳಾರಿ ಮಹಾನಗರ ಪಾಲಿಕೆ ಮೇಯರ್ ಪಿ.ಗಾದೆಪ್ಪ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯುಲು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಒಳಾಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಬಳ್ಳಾರಿ ವಲಯ ಪೊಲೀಸ್ ಉಪ ಮಹಾನಿರೀಕ್ಷಕರಾದ ವರ್ತಿಕಾ ಕಟಿಯಾರ್, ಬಳ್ಳಾರಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್, ಕೊಪ್ಪಳ ಜಿಲ್ಲಾಧಿಕಾರಿ ಡಾ.ಬಿ.ಸುರೇಶ್ ಹಿಟ್ನಾಳ, ವಿಜಯನಗರ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ರಾಯಚೂರು ಜಿಲ್ಲಾಧಿಕಾರಿ ನಿತೀಶ್ ಕೆ., ಬಳ್ಳಾರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ವಿ.ಜೆ., ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ ಅರಸಿದ್ದಿ, ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ., ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪುಟ್ಟ ಮಾದಯ್ಯ,

ಬಳ್ಳಾರಿ ವಿಭಾಗ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಹೇಮರಾಜ ಕೆ., ಅಭಿಯೋಗ

ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಬೆಂಗಳೂರಿನ ನಿರ್ದೇಶಕರಾದ ಅಂಜಲಿದೇವಿ, ಬಳ್ಳಾರಿ ವಿಭಾಗೀಯ ಕಚೇರಿಯ ಕಾನೂನು ಅಧಿಕಾರಿ(ಹಿರಿಯ) ಬಿ.ಎಸ್.ಪಾಟೀಲ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಬಿಡಾಡಿ ದನಗಳನ್ನು ಕಟ್ಟಿಕೊಳ್ಳಿ; ಇಲ್ಲದಿದ್ದರೆ ಕ್ರಮ

ಬಳ್ಳಾರಿ : ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಿಡಾಡಿ ದನಕರುಗಳ ಮಾಲೀಕರು ತಮ್ಮ ದನಕರುಗಳನ್ನು ಮನೆಯಲ್ಲಿಯೇ ಕಟ್ಟಿಕೊಳ್ಳಬೇಕು. ಇಲ್ಲದಿದ್ದಲ್ಲಿ ಸಾರ್ವಜನಿಕ ಉಪದ್ರವದಡಿ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

ನಗರದಲ್ಲಿ ಬಿಡಾಡಿ ದನಕರುಗಳು ಮುಖ್ಯರಸ್ತೆಗಳಲ್ಲಿ ಅಡ್ಡಲಾಗಿ ತಿರುಗಾಡುವುದು, ಮಲಗಿರುವುದು ಮತ್ತು ಸಾರ್ವಜನಿಕರಿಗೆ ವಾಹನ ಸಂಚಾರಕ್ಕೆ ತೊಂದರೆಯುಂಟು ಮಾಡುತ್ತಿರುವುದು ಕಂಡುಬಂದಿದ್ದು, ಇದರಿಂದ ಬಿಡಾಡಿ ದನಗಳಿಗೂ ತೊಂದರೆಯಾಗುತ್ತಿದೆ.ಬಿಡಾಡಿ ದನಗಳ ಮಾಲೀಕರು ಈ ಕುರಿತು ಗಮನ ಹರಿಸದೇ ದನಕರುಗಳನ್ನು ರಸ್ತೆಗಳ ಮೇಲೆ ಬಿಡುತ್ತಿರುವುದನ್ನು ಪಾಲಿಕೆಯು ಗಂಭೀರವಾಗಿ ಪರಿಗಣಿಸಿದೆ. ಹಾಗಾಗಿ ಬಿಡಾಡಿ ದನಕರುಗಳ ಮಾಲೀಕರು ತಮ್ಮ ದನಕರುಗಳನ್ನು ತಮ್ಮ ಸುಪರ್ದಿಯಲ್ಲಿಯೇ ಕಟ್ಟಿಕೊಳ್ಳಬೇಕು.ಇಲ್ಲವಾದಲ್ಲಿ ಪಾಲಿಕೆಯಿಂದ ಕಾರ್ಯಾಚರಣೆ ನಡೆಸಿ ಎಲ್ಲಾ ಬಿಡಾಡಿ ದನಕರುಗಳನ್ನು ಸೆರೆಹಿಡಿದು ನಿಯಮಾನುಸಾರ ನಗರದಿಂದಾಚೆ ಸ್ಥಳಾಂತರಿಸಲಾಗುತ್ತದೆ. ಮರಳಿ ನೀಡಲಾಗುವುದಿಲ್ಲ ಹಾಗೂ ಅಂತಹ ಮಾಲೀಕರನ್ನು ಗುರುತಿಸಿ ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಬಳ್ಳಾರಿ ಮಹಾನಗರ ಪಾಲಿಕೆ ಆಯುಕ್ತರು ಎಚ್ಚರಿಸಿದ್ದಾರೆ.

## ಸಭಾಧ್ಯಕ್ಷ ಜಿಲ್ಲಾ ಪ್ರವಾಸ

ಬಳ್ಳಾರಿ:ಕರ್ನಾಟಕ ವಿಧಾನಸಭೆ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಅವರು ಡಿ.14 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಅಂದು ಬೆಳಿಗ್ಗೆ 09.50 ಗಂಟೆಗೆ ಬೆಂಗಳೂರಿನಿಂದ ಹೊರಟು, ಬೆಳಿಗ್ಗೆ 10.40 ಕ್ಕೆ ಸಂಡೂರಿನ ತೋರಣಗಲ್ಲಿನ ಜಿಂದಾಲ್ ಏರ್‌ಪೋರ್ಟ್ ಗೆ ಆಗಮಿಸಿ, ಜಿಂದಾಲ್ ಗೆಸ್ಟ್ ಹೌಸ್ ನಲ್ಲಿ ವಾಸ್ತವ್ಯ ಮಾಡುವರು.

ಬಳಿಕ ಮಧ್ಯಾಹ್ನ 03 ಗಂಟೆಗೆ ಅಲ್ಲಿಂದ ಹೊರಟು ಸಂಜೆ 04 ಗಂಟೆಗೆ ಕುರುಗೋಡು ಪಟ್ಟಣಕ್ಕೆ ಆಗಮಿಸುವರು. ಪಟ್ಟಣದಲ್ಲಿ ಏರ್ಪಡಿಸಿರುವ 4ನೇ ಉರ್ಸ್–ಎ–ಷರೀಫ್ ಹಜರತ್ ಖ್ವಾಜಾ ಸೈಯದ್ ಶಾ ಸಾಹಿಬ್ ಪೀರ್ ಥೇರ್ ಉರ್ಸ್–ಎ·ರೀಫ್ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ನಂತರ ಸಂಜೆ 05 ಗಂಟೆಗೆ ಧಾರವಾಡಕ್ಕೆ ಪ್ರಯಾಣಿಸುವರು ಎಂದು ಆಪ್ತ ಕಾರ್ಯದರ್ಶಿಯವರು ತಿಳಿಸಿದ್ದಾರೆ.

## ಅರ್ಹ ಅನುಭವಿ ಸರ್ಕಾರೇತರ ಸಂಸ್ಥೆಗಳಿಂದ ಕೋಟೇಷನ್ ಸಲ್ಲಿಸುವ ಕುರಿತು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ: ಶಹಾಬಾದ ನಗರಸಭೆಯ ವ್ಯಾಪ್ತಿಯಲ್ಲಿನ ಬೀದಿ ನಾಯಿಗಳ ಪಾಲನೆ ಮತ್ತು ಪ್ರಾಣಿಗಳ ರಕ್ಷಣಾ ಸೇವೆಗಳನ್ನು ನೀಡಲು ಅನುಭವ ಹೊಂದಿರುವ ಅರ್ಹ ಅನುಭವಿ ಸರ್ಕಾರೇತರ ಸಂಸ್ಥೆಗಳು (ಎನ್‌ಜಿ) ಗಳಿಂದ ಮುಚ್ಚಿದ ಲಕೋಟೆಯಲ್ಲಿ ಸೀಲ್ ಬಂದ ಕೋಟೆಶನಗಳನ್ನು ಆಹ್ವಾನಿಸಲಾಗಿದೆ ಎಂದು ಶಹಬಾದ ನಗರಸಭೆಯ ಪೌರಾಯುಕ್ತರು ತಿಳಿಸಿದ್ದಾರೆ.

ಬೀದಿ ನಾಯಿಗಳಿಗೆ ಪ್ರತಿ ನಿತ್ಯ ಆಹಾರ ಮತ್ತು ನೀರು ನೀಡುವುದು, ಲಸಿಕೆ ನಿಯಮಿತ ಆರೋಗ್ಯ ಪರಿಶಿಲನೆ ಮತ್ತು ಪ್ರಾಥಮಿಕ ಚಿಕಿತ್ಸಾ ವ್ಯವಸ್ಥೆ, ಎಬಿಸಿ ನಿಯಾಮಗಳ ಅನುಸಾರ ಸಂತಾನ ಹರಣ ಶಸ್ತ್ರ ಚಿಕಿತ್ಸೆ (sterilization) ಕಾರ್ಯದ ಸಮನ್ವಯತೆ, ಆಶ್ರಯ ಕೇಂದ್ರದ ನಿರ್ವಹಣೆ ಹಾಗೂ ದಾಖಲಾತಿ ಸಂರಕ್ಷಣೆ, ನಗರಸಭೆಯ ಆರೋಗ್ಯ ವಿಭಾಗಕ್ಕೆ ದೈನಂದಿನ ವರದಿ ನೀಡುವುದು.

ಅರ್ಹತಾ ಮಾನದಂಡಗಳು:– ಭಾರತೀಯ ಪ್ರಾಣಿ ಕಲ್ಯಾಣಿ ಮಂಡಳಿ

ಯವರಿಗಂದ ಪ್ರಮಾಣ ಪತ್ರ ಹೊಂದಿರುವ ನೋಂಧಯಿತ ಸರಕಾರೇತರ ಸಂಸ್ಥೆಗಳು, ಪ್ರಾಣಿ ಪಾಲನೆ/ಎ.ಬಿ.ಸಿ. ಕಾರ್ಯಕ್ರಮಗಳಲ್ಲಿ ಕನಿಷ್ಠ ವರ್ಷದ ಅನುಭವ ಎನ್.ಜಿ.ಓ. ಅಧಿಕೃತ ಪ್ರತಿನಿಧಿಯ ಮಾನ್ಯತೆ ಹೊಂದಿರುವ ಆಧಾರ ಪ್ರಮಾಣ ಪತ್ರಗಳು ಬ್ಯಾಂಕ್ ಖಾತೆಯ ವಿವರು. Animal birth control (dog) ಖಣಟಚಿ, ಸಲ್ಲಿಕೆ ವಿವರಗಳು, ಅರ್ಹ ಸಂಸ್ಥೆಗಳು ಮುಚ್ಚಿದ ಲಕೋಟೆಯಲ್ಲಿ ಕೋಟೇಶನಗಳನ್ನು ಹಾಗೂ ಅಗತ್ಯ ದಾಖಲೆಗಳಣ್ನು ಪೌರಯುಕ್ತರು ನಗರಸಭೆ ಶಾಹಾಬಾದ ಕಚೇರಿಗೆ 15 ದಿನಗಳ ಒಳಗಾಗಿ ಅವಶ್ಯಕ ಇರುವ ದಾಖಲೆಗಳನ್ನು ನಗರಸಭೆ ಶಹಬಾದ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಗರಸಭೆಯ ಆರೋಗ್ಯ ವಿಭಾಗವನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ.

# ರಾಷ್ಟ್ರೀಯ ಚಾಲುಕ್ಯ ಉತ್ಸವ ಮುಂದೂಡಿಕೆ: ಜ, 17 ರಿಂದ ಚಾಲುಕ್ಯ ಉತ್ಸವ ಆಚರಿಸಲು ನಿರ್ಧಾರ

ಮಲ್ಲಮ್ಮ ನುಡಿ ವಾರ್ತೆ

**ಬಾಗಲಕೋಟೆ:** ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ರಾಷ್ಟ್ರೀಯ ಚಾಲುಕ್ಯ ಉತ್ಸವವನ್ನು ವಿವಿಧ ಕಾರಣಗಳ ಹಿನ್ನಲೆಯಲ್ಲಿ ಬರುವ 2026 ಜನವರಿ 17, 18 ಹಾಗೂ 19 ರಂದು ಆಚರಿಸಲು ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು.



ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಗುರುವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಬೆಳಗಾವಿಯ ಸುವರ್ಣ ಸೌಧದಲ್ಲಿ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ನೇತೃತ್ವದಲ್ಲಿ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳೊಂದಿಗೆ ಸಭೆಯ ತಿರ್ಮಾಣದಂತೆ ಜನವರಿ 17 ರಿಂದ 19 ವರೆಗೆ ಅದ್ದೂರಿಯಾಗಿ ಉತ್ಸವವನ್ನು ಆಚರಿಸಲು ನಿರ್ಧರಿಸಲಾಗಿದೆ ಎಂದರು.

ಬೆಳಗಾವಿಯ ಚಲಿಗಾಲದ ಅಧಿವೇಶನ ಡಿಸೆಂಬರ 19ರ ವರೆಗೆ ನಡೆಯಲಿದೆ. ಇದಲ್ಲದೇ ಜನವರಿ 3 ರಿಂದ ಬಾದಾಮಿ ಬನಶಂಕರಿ ದೇವಿಯ ಜಾತ್ರೆ ಕೂಡಾ ಒಂದು ತಿಂಗಳ ವರೆಗೆ ನಡೆಯುತ್ತಿರುವ ಹಿನ್ನಲೆಯಲ್ಲಿ ಉತ್ಸವವನ್ನು ಮುಂದೂಡಲಾಗಿದೆ. ಕಾರ್ಯಕ್ರಮದ ಸಿದ್ದತೆಗಳನ್ನು ಈಗಾಗಲೇ ಪ್ರಾರಂಭಗೊಂಡಿದ್ದು, ಎಲ್ಲ ರೀತಿಯ ಸಿದ್ದತೆ ಮಾಡಿಕೊಳ್ಳಲಾಗುತ್ತಿದೆ. ಇದೊಂದು ರಾಷ್ಟ್ರೀಯ ಉತ್ಸವವಾಗಿರುವದರಿಂದ ಅಂತರರಾಷ್ಟ್ರೀಯ ಮಟ್ಟದ ಖ್ಯಾತಕಲಾವಿದರು,ಸಂಗೀತಗಾರರು,ನೃತ್ಯತಂಡಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಿದರು.

ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಮಾತನಾಡಿ ಪ್ರಸಕ್ತ ಬಜೆಟ್‌ನಲ್ಲಿ ಘೋಷಿಸಿದಂತೆ ನೃತ್ಯೋತ್ಸವ ರೂಪದಲ್ಲಿ ಚಾಲುಕ್ಯ ಉತ್ಸವವನ್ನು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ. ಓಡಿಸ್ಸಾದಲ್ಲಿ ಮೂರು ತಿಂಗಳುಗಳ ಕಾಲ ನಡೆ–ಯುತ್ತದೆ. ಆ ಮಾದರಿಯಲ್ಲಿ ಮೂರು ದಿನಗಳ ಕಾಲ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದೆ. ಇದಕ್ಕೆ ಕಾಲಾವಕಾಶ ಬೇಕಾಗಿರುವದರಿಂದ ಜನವರಿ 17ಕ್ಕೆ ಉತ್ಸವವನ್ನು ಮುಂದೂಡಲಾಗಿದೆ. ಈ ಬಾರಿ ನೃತ್ಯೋತ್ಸವದ ಜೊತೆಗೆ ಗ್ರಾಮೀಣ ಕ್ರೀಡೆಗಳನ್ನು ಸಹ ಆಯೋಜನೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತವಿರುವ ಚಾಲುಕ್ಯರ ಐತಿಹಾಸಿಕ ಪರಂಪರೆ, ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಮೆಲಕು ಹಾಕುವ ಈ ಮೂರು ದಿನಗಳ ಸಂಗೀತ ನೃತ್ಯೋತ್ಸವದಲ್ಲಿ ರಾಷ್ಟ್ರ–ಅಂತರಾಷ್ಟ್ರೀಯ ಮಟ್ಟದ ಖ್ಯಾತ ಕಲಾವಿದರು, ಸಂಗೀತಗಾರರು,ನೃತ್ಯತಂಡಗಳನ್ನು ಆಹ್ವಾನಿಸಲಾಗುತ್ತಿದೆ. ಅಲ್ಲದೇ ಚಾಲುಕ್ಯರ ನಾಡಿನ ಐತಿಹಾಸಿಕ ಪರಂಪರೆ ಕುರಿತಂತೆ ವಿಚಾರಗೋಷ್ಠಿ ಸಹ ಹಮ್ಮಿಕೊಳ್ಳಲಾಗುತ್ತಿದೆ. ಮೊದಲ ದಿನ ಬಾದಾಮಿಯಲ್ಲಿ ಉದ್ಘಾಟನೆ ಕಾರ್ಯಕ್ರಮ ನಡೆಯಲಿದ್ದು, ಐಹೊಳೆಯಲ್ಲಿ ಕಾರ್ಯಕ್ರಮದ ಸಮಾರೋಪ ನಡೆಯಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಸೇರಿದಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿದರು. ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ಸೇರಿದಂತೆ ಇತರರು ಇದ್ದಾರೆ.

## ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್ ಸಮಸ್ಯೆ॥ ಶಾಸಕರ ಪ್ರಶ್ನೆಗೆ ಸಚಿವರ ಉತ್ತರ.



**ಯಾದಗಿರಿಮತಕ್ಷೇತ್ರದಕಂದಳ್ಳಿ,ಅರ್ಜುಣಗಿ, ಕುಮನೂರ,ಗೋಡೊಹಾಳ,ಹಾಲಗೇರಾ, ಗಡ್ಡೆಸೂಗುರು,ಬಬಲಾದಮತ್ತುವಡಗೇರಾ ಮತ್ತು ಗುರುಮಠಕಲ್ ಕ್ಷೇತ್ರದ ಏಳು ಗ್ರಾಮಗಳಿಗೆ ಇದರಉಪಯೋಗವಾಗಲಿದೆ ಎಂಬ ಮಾಹಿತಿ ಶಾಸಕರು ಸಚಿವರ ಗಮನಕ್ಕೆ ತಂದರು.**

**ಬಿಸಿಬಿ ಗೇಟ್ ಬದಲಾವಣೆಗೆ 75 ಕೋಟಿ ರೂ.**

ಯಾದಗಿರಿ : ತಾಲೂಕಿನ ಹತ್ತುಕ್ಕೂ ಹೆಚ್ಚು ಹಳ್ಳಿಗಳ ಸಾವಿರಾರು ರೈತರು ಕುಡಿಯುವ ನೀರು ಮತ್ತು ಎರಡನೇ ಬೆಳೆಗೆ ನೀರಾವರಿ ಅನುಕೂಲವಾಗುವ ಭೀಮಾ ನದಿ ವ್ಯಾಪ್ತಿಯ ಕಂದಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್‌ನ ಬಿಸಿಬಿ ಗೇಟು ಬದಲಾವಣೆ ಕಾರ್ಯ ವಿಳಂಬವಾಗುತ್ತಿದ್ದು, ಕೂಡಲೇ ಅದನ್ನು ಮಾಡಿಸಬೇಕೆಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಬುಧವಾರದ ಅಧಿವೇಶನದಲ್ಲಿ ಒತ್ತಾಯಿಸಿದರು.

ಈ ವೇಳೆ ಸಣ್ಣ ನೀರಾವರಿ ಇಲಾಖೆ ಸಚಿವ ಬೋಸರಾಜು ಮಾತನಾಡಿ, 2001ರಲ್ಲಿ ನಿರ್ಮಿತವಾದ ಬಿಸಿಬಿಯ ಗೇಟುಗಳಲ್ಲಿ ಲೀಕೇಜ್ ಗಂಭೀರವಾಗಿದ್ದು,ಮ್ಯಾನುಯಲ್ ಗೇಟುಗಳನ್ನು,ಮೇಕ್ಯಾನಿಕಲ್ ವರ್ಟಿಕಲ್ ಗೇಟುಗಳಿಗೆ ಬದಲಿಸಲು 75 ಕೋಟಿಯ ಲೇಟೆಸ್ಟ್ ಎಸ್ಟಿಮೇಟ್ ಸಿದ್ಧವಾಗಿದೆ ಎಂದರು. ಇದಕ್ಕೆ ಸಮಾಧಾನವಾಗದ ಶಾಸಕರು, ನನ್ನ ಈ ಪ್ರಶ್ನೆಗೆ ಸರ್ಕಾರ ಎರಡು ವರ್ಷಗಳಿಂದ ಒಂದೇ ರೀತಿಯ ಉತ್ತರ ನೀಡುತ್ತಿದೆ. 62 ಕೋಟಿಯ ಅಂದಾಜು ಈಗ 75 ಕೋಟಿಗೆ ಏರಿದೆ. ಮುಂದೂಡುತ್ತಾ ಹೋದಂತೆ ವೆಚ್ಚ ಇನ್ನೂ ಹೆಚ್ಚಾಗುತ್ತದೆ. ರೈತರಿಗೆ ದಿನದಿಂದ ದಿನಕ್ಕೆ ತೊಂದರೆ ಹೆಚ್ಚುತ್ತಿದೆ. ಹತ್ತು ಹಳ್ಳಿಗಳ ಬೆಳೆ ಹಾಗೂ ಕುಡಿಯುವ ನೀರು ಇದೇ ಗೇಟುಗಳ ಮೇಲೆ ಅವಲಂಬಿತವಾಗಿದೆ. ಕೆಲಸವನ್ನು ಯಾವಾಗ ಮಾಡಿಸುವಿರಿ? ಎಂದು ಸಚಿವರನ್ನು ಮರು ಪ್ರಶ್ನಿಸಿದರು.ಆಗ ಸಚಿವರು ಮುಂದಿನ ಬಜೆಟ್‌ನಲ್ಲಿ ಮೆಂಟೆನೆನ್ಸ್ ಹೆಡ್ ಅಡಿ ಹೆಚ್ಚಿನ ಪ್ರಥಮ ಆದ್ಯತೆ ಮೇರೆಗೆ ನೆರವು ನೀಡಲಾಗುತ್ತದೆ ಎಂದು ಸಚಿವರು ಹೇಳಿದರು.

## ಪೋಲಿಸ್ ಇಲಾಖೆಗೆ ವಾಹನ ಕೊಡುಗೆ



**ಮಲ್ಲಮ್ಮ ನುಡಿ ಬಾಗಲಕೋಟೆ:** ಎಸ್.ಆರ್.ಪಾಟೀಲ ಸಮೂಹ ಸಂಸ್ಥೆಯಿಂದ ಜಿಲ್ಲಾ ಪೋಲಿಸ್ ಇಲಾಖೆಗೆ ಇನೋವಾ ಕ್ರಿಸ್ಟಾ ವಾಹನವನ್ನು ನೀಡಲಾಯಿತು. ಮಾಜಿ ಸಚಿವ, ಸಂಸ್ಥೆಯ ಅಧ್ಯಕ್ಷ ಎಸ್.ಆರ್.ಪಾಟೀಲರು ಬುಧವಾರ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೊಯೇಲ ಅವರಿಗೆ ವಾಹನ ಹಸ್ತಾಂತರಿಸಿದರು. ಜಿಲ್ಲೆಯಲ್ಲಿ ಕಾನೂನು, ಸುವ್ಯವಸ್ಥೆ ಕಾಪಾಡುವಲ್ಲಿ ಪೋಲಿಸ್ ಇಲಾಖೆಯ ನಿರಂತರ ಸೇವೆ ಮತ್ತು ಸಮರ್ಪಣೆಗೆ ನಮ್ಮ ಸಂಸ್ಥೆ ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಈ ವಾಹನವನ್ನು ನೀಡುತ್ತಿದ್ದೇವೆ ಎಂದು ಪಾಟೀಲ ಹೇಳಿದ್ದಾರೆ.ಸಮಾಜದ ಸುರಕ್ಷತೆ ಮತ್ತು ಜನರ ಕಲ್ಯಾಣಕ್ಕಾಗಿ ಪೋಲಿಸ್ ಇಲಾಖೆ ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಇನೋವಾ ಕ್ರಿಸ್ಟಾ ವಾಹನ ಸಹಕಾರಿ ಆಗಲಿ ಎಂದು ಎಸ್.ಆರ್.ಪಾಟೀಲ ಆಶಯ ವ್ಯಕ್ತಪಡಿಸಿದ್ದಾರೆ.

## ಖಾಜಿ ಅವರಿಂದ ಚನ್ನಬಸವ ಶ್ರೀಗಳಿಗೆ ಶ್ರದ್ಧಾಂಜಲಿ

ತಾಳಿಕೋಟೆ:ಬಸವನಬಾಗೇವಾಡಿ ತಾಲೂಕಿನ ಇಂಗಳೇಶ್ವರ ಗ್ರಾಮದ ವಚನ ಶಿಲಾ ಮಂಟಪದ ಪೀಠಾಧಿಪತಿಗಳಾದ ಪರಮ ಪೂಜ್ಯ ಚನ್ನಬಸವ ಮಹಾಸ್ವಾಮಿಗಳ ನಿಧನಕ್ಕೆ ತಾಳಿಕೋಟಿ ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.



ಗುರುವಾರ ಇಂಗಳೇಶ್ವರದ ವಚನ ಶಿಲಾ ಮಂಟಪಕ್ಕೆ ಭೇಟಿ ನೀಡಿದ ಅವರು ಪೂಜ್ಯ ಮಠಾಧೀಶರೊಂದಿಗೆ ಸೇರಿ ಲಿಂಗೈಕ್ಯ ಚನ್ನಬಸವ ಶ್ರೀಗಳ ಪಾರ್ಥಿವ ಶರೀರಕ್ಕೆ ಪುಷ್ಪಾರ್ಪಣೆ ಅರ್ಪಿಸಿ ಶ್ರದ್ಧಾಂಜಲಿ ಸಲ್ಲಿಸಿದರು. ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಅವರು ಕಳೆದ 30 ವರ್ಷಗಳಿಂದ ನಮ್ಮೊಂದಿಗೆ ಸ್ನೇಹಪರ ಸಂಬಂಧವನ್ನು ಹೊಂದಿದ್ದ ಶ್ರೀಗಳು ಮತ್ತು ನಾನು ಸಾಕಷ್ಟು ಕಾರ್ಯಕ್ರಮಗಳಲ್ಲಿ ವೇದಿಕೆಯನ್ನು ಹಂಚಿಕೊಂಡಿದ್ದೇವೆ ಅವರೊಬ್ಬ ಅಪ್ಪಟ ಬಸವ ಅನುಯಾಯಿ,ತಮ್ಮ ಮಠದಲ್ಲಿ ಸಾವಿರಾರು ವಚನಗಳನ್ನು ಗೋಡೆಗಳಲ್ಲಿ ಬರೆಯಿಸಿ ನಿರಂತರ ಪ್ರಚಾರವನ್ನು ಮಾಡಿದವರು. ಅತ್ಯಂತ ಸರಳ ವ್ಯಕ್ತಿತ್ವದ ನೇರ ನಿಷ್ಠುರ ನುಡಿಗಳಿಗೆ ಹೆಸರುವಾಸಿಗಳಾಗಿದ್ದರು. ಅವರ ಅಗಲುವಿಕೆ ಧಾರ್ಮಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ತಿಳಿಸಿದರು. ಈ ಸಮಯ ʼದಲ್ಲಿ ಮುಸ್ಲಿಂ ಸಮಾಜದ ಗಣ್ಯರಾದ ಅಬ್ದುಲ್ ರೆಹಮಾನ ಎಕೀನ, ಮೆಹಬೂಬ ಚೋರಗಸ್ತಿ, ಮುರ್ತುಜಾಸಾಬ ಮೇತ್ರಿ(ಇಂಜನೀಯರ),ನಜೀರ ಚೋರಗಸ್ತಿ ಇದ್ದರು.

## ವಳಖಿಂಡಿಯಲ್ಲಿ ಉಚಿತ ಆರೋಗ್ಯ ತಪಾಸಣೆ



**ಮಲ್ಲಮ್ಮ ನುಡಿ ವಾರ್ತೆಹುಮನಾಬಾದ:**

**ಧನ್ವಂತರಿ ಪಂಚಕರ್ಮ ಆಯುರ್ವೇದಿಕ ಆಸ್ಪತ್ರೆ ಹುಮನಾಬಾದ ವತಿಯಿಂದ ಡಾ.ಸಚೀನ್ ಅಗಡಿರವರು ಉಚಿತವಾಗಿ ರೋಗಿಗಳಿಗೆ ಇತ್ತೀಚೆಗೆ ವಳಖಿಂಡಿ ಗ್ರಾಮದಲ್ಲಿ ಆರೋಗ್ಯ ತಪಾಸಣೆ ಮಾಡಿದರು. ಯಾವುದೇ ಈ ಸಂದರ್ಭದಲ್ಲಿ ರೋಗಿಗಳು ಉಚಿತ ತಪಾಸಣೆಯಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು. ಯಾವುದೇ ಕಾಯಿಲೆ ಇದ್ದರೂ ಸರಿಪಡೊಸಬಹುದು. ಇಂದೇ ಭೇಟಿ ನೀಡಿ. ಪಂಚಕರ್ಮ ಆಸ್ಪತ್ರೆ ಬಸ್ ನಿಲ್ದಾಣ ಹತ್ತಿರ ಅಗಡಿ ಲೇಔಟ್ ಹುಮನಾಬಾದ. 9742081111**

## ಶಾಸಕ ಶರಣಗೌಡ ಆಕ್ರೋಶ । ತಾಂಡಗಳಿಗೆ ಆಹಾರ ವಿತರಣೆನೇ ಇಲ್ಲ

## ತಾಂಡಗಳಲ್ಲಿ ಫುಡ್‌ಗ್ರೇನ್ ವಿತರಣೆ ಸಂಪೂರ್ಣ ಸ್ಥಗಿತ ಶಾಸಕರ ಆಕ್ರೋಶ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:

ಜಿಲ್ಲೆಯ ಗುರುಮಠಕಲ್ ಕ್ಷೇತ್ರಕ್ಕೆ ಸಂಬಂಧಿಸಿದ ರೇಷನ್ ವಿತರಣೆ ಹಾಗೂ ತಾಂಡಗಳಲ್ಲಿ ಸಾರ್ವಜನಿಕ ವಿತರಣೆ ವ್ಯವಸ್ಥೆಯ (ಪಿಡಿಎಸ್) ಅವ್ಯವಸ್ಥೆ ಕುರಿತಂತೆ ಗುರುವಾರ ಶಾಸಕ ಶರಣಗೌಡ ಕಂದಕೂರ ಅವರು ವಿಧಾನಸಭೆಯಲ್ಲಿ ಗಂಭೀರ ಆಕ್ಷೇಪ ವ್ಯಕ್ತಪಡಿಸಿದರು. ಅವರ ಪ್ರಶ್ನೆಗೆ ಇಲಾಖೆಯ ಅಧಿಕಾರಿಗಳು ತಪ್ಪು ಮಾಹಿತಿ, ಜೊತೆಗೆ ವಿಧಾನಸಭೆ ಸದಸ್ಯರಿಗೆ ವಿಧಾನ ಪರಿಷತ್ ಎಂದು ಉಲ್ಲೇಖಿಸಿರುವ ಗಂಭೀರ ದೋಷ ಸಂಭವಿಸಿದೆ. ಇಂತಹ ಗಂಭೀರ ನಿರ್ಲಕ್ಷಕ್ಕೆ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ನನ್ನ ಪ್ರಶ್ನೆಗೆ ಜಿಲ್ಲಾಮಟ್ಟದ ಅಧಿಕಾರಿಗಳು ತಪ್ಪು ಮಾಹಿತಿ ನೀಡಿದ್ದಾರೆ. 55 ತಾಂಡಗಳು ಇರುವ ನನ್ನ ಕ್ಷೇತ್ರದಲ್ಲಿ ಕೇವಲ 23 ಶಾಂಡಗಳಿಗೆ ಮಾತ್ರ ವಿಶರಣೆ ಮಾಡಿದಂತೆ ತಪ್ಪು ವಿವರ ನೀಡಿದ್ದಾರೆ ಎಂದು ಶಾಸಕರು ಕಿಡಿ ಕಾರಿದರು.

80 ವರ್ಷಗಳಿಂದ ಕೇಂದ್ರ ರಾಜ್ಯ ಸರ್ಕಾರಗಳು ಉಚಿತ ಅಕ್ಕಿ ನೀಡುತ್ತಿವೆ. ಆದರೆ ನಮ್ಮ ಜಿಲ್ಲೆಯ ಅಲ್ಲಿ ತಾಂಡಗಳಿಗೆ, ಗ್ರಾಮೀಣ ಪ್ರದೇಶಗಳಿಗೆ ಡೀಲರ್‌ಗಳು ತಲುಪುವುದೇ ಇಲ್ಲ. ಜನರು 4–5 ಕಿಮೀ ದೂರ ಹೋಗಿ ಡೀಲರ್‌ನ್ನು ಹುಡುಕಬೇಕು. ಕೆಲವೊಮ್ಮೆ ಇರುದಿಲ್ಲ,ಕಳೆದ ಒಂದೂವರೆ ತಿಂಗಳಿಂದ ಜಿಲ್ಲಾಧಿಕಾರಿ ಮಟ್ಟದಲ್ಲಿ ಕೇಳಿದರೂ ಪರಿಹಾರ ಇಲ್ಲ, ಎಂದು ಆಕ್ರೋಶ ವ್ಯಕ್ತಪಡಿಸಿದರು.ಸರ್ಕಾರದ ನಿಯಮ ಪಾಲನೆಯಿಲ್ಲ. ಉಪಕೇಂದ್ರ, ಅಂಗಡಿ ತೆರೆದಿಲ್ಲ, ಮೂರು ಕಿಮೀಟರ್‌ಗಿಂಶದೂರದ ಗ್ರಾಮಗಳಿಗೆ ಉಪಕೇಂದ್ರ ತೆರೆಯಬೇಕು ಎಂಬ ನಿಯಮವಿದ್ದರೂ ಇದನ್ನು ಯಲಾರೂ ಪಾಲಿಸುತ್ತಿಲ್ಲ ಎಂದು ಶಾಸಕರು ಆರೋಪಿಸಿದರು. ನಮ್ಮ ಕ್ಷೇತ್ರದ 55 ತಾಂಡಗಳಲ್ಲಿ



ಒಂದಕ್ಕೂ ಡೀಲರ್ ಫುಡ್‌ಗ್ರನ್ ಕೊಡಲು ಹೋಗುವುದಿಲ್ಲ. ನಿಯಮ ಪಾಲಿಸದ ಡೀಲರ್‌ಗಳ ಮೇಲೆ ಕ್ರಮ ಕೈಗೊಳ್ಳಬೇಕು, ಎಂದು ಸಚಿವರಿಗೆ ಮನವಿ ಮಾಡಿದರು.

ಸಚಿವರೇ ನಮ್ಮ ಜಿಲ್ಲೆಗೆ ನೀವು ಬಂದೇ ಇಲ್ಲ. ಇಷ್ಟರಲ್ಲಿಯೇ 2–3 ದಿನಗಳ ಮಟ್ಟಿಗೆ ಬನ್ನಿ, ಊರು,ತಾಂಡಾಗಳಿಗೆ ಭೇಟಿ ಮಾಡಿಸಿವೆ. ನಿಮಗೆ ಸತ್ಯದ ಪರಿಚಯವಾಗುತ್ತದೆ ಎಂದರು.

**ಯು.ಟಿ.ಖಾದರ್ ಆಗಿದೇ, ಓಕೆ, ಓಕೆ :**

ಸಭಾಪತಿ ಸಭಾಧ್ಯಕರೇ ತಮಗೆ ಉತ್ತರ ನೀಡಿದ ಅಧಿಕಾರಿಗಳು ವಿಧಾನ ಪರಿಷತ್ ಎಂದು ಬರೆದಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ಕ್ರಮ ಆಗಬೇಕೆಂದು ಶಾಸಕ ಕಂದಕೂರ ಒತ್ತಾಯಿಸಿದಾಗ ಶಾಸಕರೇ, ಆಗಿದೆ, ತಪ್ಪು ಆಗಿದೆ. ಅವರ ಕ್ರಮತೆಗೆದುಕೊಂಡರೇ ಎಲ್ಲ ಸರ್ಕಾರಿ ಕಚೇರಿಗಳು ಖಾಲಿಯಾಗುತ್ತದೆ. ಇರಲಿ ಬಿಡಿ ಎಂದು ಸಭಾಧ್ಯಕ್ಷರು ಹೇಳಿದಾಗ ಅಸಮಾಧಾನ ವ್ಯಕ್ತಪಡಿಸಿದ ಅವರು, ಹಾಗಾದರೇ ಅಧಿಕಾರಿಗಳು ಏನು ಬೇಕಾಗಿದ್ದು ಬರೆಯಬಹುದೇ? ನನಗೆ ಜನರು ವಿಧಾನಸಭೆ ಆಯ್ಕೆ ಮಾಡಿದ್ದಾರೆ. ಆದರೆ ಈ ಉತ್ತರ ಪ್ರತಿ ನೋಡಿದಾಗ ನನಗೆ ಗಾಬರಿಯಾಯಿತು. ನಾನು ಎಂಎಲ್ಎನೋ, ಎಂಎಲ್‌ಸಿನೋ ಅರೆ ಕ್ಷಣ ದಂಗಾದೆ ಎಂದರು. ನಮ್ಮ

**ಸಚಿವ ಮುನಿಯಪ್ಪ : ಉಪಕೇಂದ್ರ ತೆರೆಯಲು ಸಮ್ಮತಿ**

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಉತ್ತರಿಸುತ್ತಾ ಮೂರು ಕಿಮೀ ಮೇಲೆ ಇರುವ ಗ್ರಾಮಗಳಿಗೆ ಉಪಕೇಂದ್ರ ತೆರೆಯಲು ಸೂಚನೆ ನೀಡಲಾಗಿದೆ, ತಾಂಡಗಳಲ್ಲಿ ನೇರ ಅಂಗಡಿ ಆರಂಭಿಸಲು ಸರ್ಕಾರ ಸಮ್ಮತಿದೆ ಎಸ್‌ಸಿ, ಎಸ್‌ಟಿ ಜನಸಂಖ್ಯೆ ಶೇ.40ಕ್ಕಿಂತ ಹೆಚ್ಚು ಇರುವ ಪ್ರದೇಶಗಳಲ್ಲಿ ಹೊಸ ಅಂಗಡಿಗಳ ಮಂಜೂರು ಮಾಡಲಾಗುವುದು. 75 ವರ್ಷಗಳು ದಾಟಿದ ವಯೋವೃದ್ಧರಿಗೆ ಅನ್ನ ಸುವಿಧಾ ಯೋಜನೆಯಡಿ ಮನೆಗೆ ನೇರ ವಿತರಣೆ ಎಂಬ ನಿರ್ಧಾರಗಳನ್ನು ಪ್ರಕಟಿಸಿದರು.

## 18 ರಂದು ನೇರ ಸಂದರ್ಶನ

**ಮಲ್ಲಮ್ಮ ನುಡಿವಾರ್ತೆಬಾಗಲಕೋಟೆ:** ಅಂಚೆ ಅಧೀಕ್ಷಕರು, ಬಾಗಲಕೋಟ ವಿಭಾಗ ಇವರು ಬಾಗಲಕೋಟ ವಿಭಾಗದಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ನಿಯುಕ್ತಿಗಾಗಿ ಪ್ರಸ್ತಾವಿಸಿದ್ದು, ಆಸಕ್ತ ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣಪತ್ರದ ನಕಲುಗಳೊಂದಿಗೆ ಡಿಸೆಂಬರ್ 18 ರಂದು ಬೆಳಿಗ್ಗೆ 11 ಗಂಟೆಗೆ ಬಾಗಲಕೋಟೆ ಸ್ಟೇಶನ್ ರಸ್ತೆ ಬಳಿಯಿರುವ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ. 18 ವರ್ಷ ವಯೋಮಿತಿಯ, 10ನೇ ತರಗತಿ ಉತ್ತೀರ್ಣ, ನಿರುದ್ಯೋಗಿ, ಸ್ವಯಂ ಉದ್ಯೋಗ ನಿರತ ಯುವಕರು, ವಿಮಾ ಕಂಪನಿ ಮಾಜಿ ಏಜೆಂಟರು, ಮಹಿಳಾ ಮಂಡಳದ ಕಾರ್ಯಕತೆ–ರ್ಯರು ಹೀಗೆ ಅಂಚೆ ವಿಭಾಗದ ಮುಖ್ಯಸ್ಥರಿಗೆ ಸಮಂಜಸವೆನಿಸಿದವರಿಗೆ ಅವಕಾಶ ನೀಡಲಾಗುವುದು.


ಕರ್ನಾಟಕ ಸರ್ಕಾರ

**ಕೃಷಿ ಇಲಾಖೆ, ಜಂಟಿ ಕೃಷಿ ನಿರ್ದೇಶಕರವರ ಕಾರ್ಯಾಲಯ, ಕಲಬುರಗಿ**

ದೂರವಾಣಿ ಸಂಖ್ಯೆ: 08472–278630 ಇ.ಮೇಲ್ : jdakalaburagi@gmail.com

ಸಂಖ್ಯೆ: ಜ.ಕೃ.ನಿ.ಕ/ತಾಂ./EOI/RKVY/ಜೇ/2025–26/3231 ದಿನಾಂಕ: 10–12–2025

**ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ**

2025–26ನೇ ಸಾಲಿನ ಕಲಬುರಗಿ ಜಿಲ್ಲೆಯಲ್ಲಿ ಕೃಷಿ ಇಲಾಖೆಯ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಅಡಿಯಲ್ಲಿ ಜೈವಿಕ ಗೊಬ್ಬರ ಗುಣ ನಿಯಂತ್ರಣ ಪ್ರಯೋಗಾಲಯ ಕಲಬುರಗಿ ಇಲ್ಲಿಗೆ ಬೇಕಾದ ವೈಜ್ಞಾನಿಕ ಉಪಕರಣಗಳು ಮತ್ತು ಇತರೆ ವಸ್ತುಗಳ ಸರಬರಾಜು ಮಾಡಲು ಟೆಂಡರ್ ಕರೆಯಲಾಗುತ್ತಿದೆ. ಸಂಬಂಧಿಸಿದಂತೆ ಇ–ಟೆಂಡರ್ ಸಂಬಂಧ ಇ–ಟೆಂಡರ್ ಕರೆಯಲಾಗಿದೆ, ಇ–ಟೆಂಡರ್ ಪ್ರಕ್ರಿಯೆ ವಿವರ ಈ ಕೆಳಗಿನಂತಿದೆ.

1) ಟೆಂಡರ್ ಪ್ರಕಟಣೆ ಸಂಖ್ಯೆ & ದಿನಾಂಕ: ಸಂ:ಜಕೃನಿಕ/ತಾಂ/ಟೆಂ/ಆರ್.ಕೆ.ವಿ.ವಾಯ್/ಜೇ/2025–26/ದಿನಾಂಕ:10.12.2025, 2) ಟೆಂಡರಗಿಟ್ಟ ಅಂದಾಜು ಮೊತ್ತ : **ರೂ. 45.00 ಲಕ್ಷಗಳು,** 3) ಟೆಂಡರ್‌ದಾರರು ಆನ್‌ಲೈನ್ ಮೂಲಕ ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : ದಿನಾಂಕ **26.12.2025 ಸಮಯ ಸಾಯಂಕಾಲ 05.30** ಗಂಟೆಯವರೆಗೆ, 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸ್ಥಳ ದಿನಾಂಕ ಮತ್ತು ಸಮಯ : **ದಿನಾಂಕ : 29.12.2025 ಬೆಳಿಗ್ಗೆ 11.30 ಗಂಟೆ,** ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯ, ಕಲಬುರಗಿ. 5) ಇ.ಎಮ್.ಡಿ. ಮೊತ್ತ **ರೂ.1.12,500.00,** 6) ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಬೇಕಾದ ಕಚೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ : ಜಂಟಿ ಕೃಷಿ ನಿರ್ದೇಶಕರ ಕಚೇರಿ ಎಸ್.ಪಿ.ಆಫೀಸ್ ಹಿಂದುಗಡೆ, ಕಲಬುರಗಿ. ದೂರವಾಣಿ : ಸಂ.08472–278630. 7) ಇ–ಟೆಂಡರ್ ಬಗ್ಗೆ ಟೆಕ್ನಿಕಲ್ ಮಾಹಿತಿಗಾಗಿ ಸಂಪರ್ಕಿಸಬಹುದಾದ ವೆಬ್‌ಸೈಟ್ ವಿಳಾಸ : https://kppp.karnataka.gov.in, ಟೆಂಡರ್ ಅರ್ಜಿ ದಿನಾಂಕವನ್ನು ವಿಸ್ತರಿಸುವ ಮತ್ತು ರದ್ದುಪಡಿಸುವ ಅಥವಾ ಬದಲಾವಣೆ ಹಕ್ಕನ್ನು ಇ–ಟೆಂಡರ್ ಸಮಿತಿಯ ಅಧ್ಯಕ್ಷರು ಹೊಂದಿದ್ದು, ಅವರ ನಿರ್ಣಯವೇ ಅಂತಿಮವಾಗಿರುತ್ತದೆ.

**ವಾ.ಸಾ.ಸಂ.ಇ./ಕಲಬುರಗಿ/838/ದೇಶಪಾಂಡೆ ಪಬ್ಲಿಸಿಟಿ/2025–26** **ಸಹಿ/– ಜಂಟಿ ಕೃಷಿ ನಿರ್ದೇಶಕರು, ಕಲಬುರಗಿ**


# ಡಾ. ಎಸ್.ಎಂ. ಪಂಡಿತ್ ರಂಗಮಂದಿರದಲ್ಲಿ ಬಹುಭಾಷಾ ನಾಟಕೋತ್ಸವ ಡಿಸೆಂಬರ್ 12 ರಿಂದ ಡಿಸೆಂಬರ್ 15 ರವರೆಗೆ

ಕಲಬುರಗಿ:ಡಿ.11(ಕರ್ನಾಟಕವಾರ್ತೆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ರಂಗಾಯಣ ಕಲಬುರಗಿ ಹಾಗೂ ಸುಲೇಮಾನ ಖತೀಬ ಸ್ಮಾರಕ ಶೈಕ್ಷಣಿಕ ಸಾಂಸ್ಕೃತಿಕ ಹಾಗೂ ಚಾರಿ–ಟೇಬಲ ಟ್ರಸ್ಟ್, ಕಲಬುರಗಿ ಇವರ ಸಹಯೋಗದಲ್ಲಿ ಡಾ.ಎಸ್.ಎಂ.ಪಂಡಿತ ರಂಗಮಂದಿರದಲ್ಲಿ ಬಹುಭಾಷ ನಾಟಕೋತ್ಸವ ಡಿಸೆಂಬರ್ 12 ರಿಂದ 15 ರವರೆಗೆ ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರಾದ ಅರುಣಕುಮಾರ ಪಾಟೀಲ್ ಉದ್ಘಾಟಿಸುವರು. ಸುಲೇಮಾನ ಖತೀಬ ಎಜುಕೇಷನ್ ಮತ್ತು ಚಾರಿಟೇಬಲ್ ಟ್ರಸ್ಟ್ ಕಾರ್ಯಾದರ್ಶಿ ಡಾ. ಶಮಿಮ್ ಸುರೈಯಾ ಘನ ಉಪಸ್ಥಿತಿ ಇರುವರು. ಮುಖ್ಯ ಅತಿಥಿಗಳಾಗಿ ನಗರ ಪೊಲೀಸ್ ಆಯುಕ್ತ ಡಾ॥ ಶರಣಪ್ಪ ಎಸ್.ಡಿ. ಕಾರ್ಯದರ್ಶಿಗಳು, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಬಸವರಾಜ ದೇಶಮುಖ, ಉತ್ತಾರಾಧಿಕಾರಿ, ರೋಜಾ ಕುರ್ದ್‌ಸಯ್ಯದ್ ಶಾ ಯಾದುಲ್ಲ ಹುಸೇನಿ, ನಿವೃತ್ತ ಯೋಜನಾ ನಿರ್ದೇಶಕರು ಮತ್ತು ಪ್ರಧಾನ ವಿಜ್ಞಾನಿಗಳು ಕೃಷಿಸಂಶೋಧನಾ ಸಂಸ್ಥೆ ಡಿ. ಎಮ್. ಮಣ್ಣೂರ, ಅಧ್ಯಕ್ಷರು, ಅಖಿಲ ಭಾರತೀಯ ಉರ್ದು ಮಂಚ, ಕಲಬುರಗಿ, ಶ್ರೀ ಸೈಯದ್ ರವೂಫ್ ಖಾದ್ರಿ, ಅಧ್ಯಕ್ಷತೆ ಕರ್ನಾಟಕ ರಂಗಾಯನ ನಿರ್ದೇಶಕರು ಡಾ. ಸುಜಾಜಾ ಜಂಗಮಶೆಟಿ ಅವರು ಅಧ್ಯಕ್ಷತೆ ವಹಿಸುವರು

**ನಾಟಕ 1**: ಕಾಲಚಕ್ರ" ಕನ್ನಡ ಮರಾಠಿ ಮೂಲ : ಶ್ರೀ ಜಯವಂತ ದಳ್ವಿ,ಶ ಕನ್ನಡಕ್ಕೆ ಅನುವಾದ : ಶ್ರೀ ಹೆಚ್.ಕೆ.ಕರ್ಕೇರ ವಿನ್ಯಾಸ ಮತ್ತು ನಿರ್ದೇಶನ: ಶ್ರೀ ಹುಲುಗಪ್ಪ ಕಟ್ಟಿಮನಿ, ಮೈಸೂರು, ರಂಗ ಪರಿಕರ/ರಂಗ ಸಜ್ಜಿಕೆ : ರಾಜಕುಮಾರ ಎಸ್. ಕೆ. ಧ್ವನಿ/ಬೆಳಕು : ಶ್ರೀನಿವಾಸ ದೋರನಹಳ್ಳಿ, ಪ್ರಸ್ತುತ ಪಡಿಸುವರು:



ಕರ್ನಾಟಕ ರಂಗಾಯಣ, ಕಲಬುರಗಿ ರೆಪರ್ಟರಿ ಕಲಾವಿದರಿಂದ, ಡಿಸೆಂಬರ್ 13ರಂದು ಸಂಜೆ 6.00 ಗಂಟೆಗೆ ಮಾತೋಶ್ರೀ ಡಾ. ದಾಕ್ಷಾಯಣಿ ಎಸ್.ಅಪ್ಪಾ ಮತ್ತು ದರ್ಗಾ ಹಜರಾತ್ ಖಾಜಾ ಬಂದಾನವಾಜ ಹಾಫಿಜ್ ಅಲಿ ಅಲ್ ಹುಸೇನಿ ಸಜ್ಜದಾ ನಶಿನ್ ಸಾನ್ಯ ವಹಿಸುವರು. ಲೋಕ ಸಭಾ ಸಂಸದರಾದ ಶ್ರೀ ರಾಧಾಕೃಷ್ಣ ದೊಡ್ಡಮನಿ ಉದ್ಘಾಟಿಸುವರು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶಾಸಕರು (ವಿಧಾನ ಸಭೆ) ಜೇವರ್ಗಿ ಡಾ. ಅಜಯಸಿಂಗ್, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮ ನಿಯಮಿತ, ಅಧ್ಯ್ಕಷೆ ಖನೀಜ್ ಫಾತೀಮ ಘನ ಉಪಸ್ಥಿತಿ ಇರವರು

ಉತ್ತರ ದಕ್ಷಿಣ ಮತಕ್ಷೇತ್ ಶಾಸಕರಾದ ಅಲ್ಲಮಪ್ರಭು ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾ ಜಿಲ್ಲಾಧಿಕಾರಿ ಬಿ. ಫೌ–ಜಿಯಾ ತರನ್ನುಮ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ವೃತ್ತ ಡಾ॥ ಸುನೀಲ ಪನ್ವಾರ್, ಬೆಂಗಳೂರು ಕರ್ನಾಟಕ ಉರ್ದು ಅಕಾಡೆಮಿ ಅಧ್ಯಕ್ಷರಾದ ಮೌಲಾನಾ ಮುಫ್ತಿ ಮಹಮ್ಮದ ಅಲಿ ಖಾಜಿ, ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ತನ್ವೀರ್ ಆಸಿಫ್ ಕೆ.ಕೆ.ಆರ್.ಡಿ.ಬಿ. ಉಪಕಾರ್ಯದರ್ಶಿ ಪ್ರವೀಣ ಪ್ರೀಯಾ ಡೇವಿಡ್, ಕಲಬುರಗಿ,ಬೀದರ, ರಾಯಚೂರ, ಕೆ.ಎಮ್. ಎಫ್ ಅಧ್ಯಕ್ಷರಾದ ಆರ್.ಕೆ.ಪಾಟೀಲ.ವಕೀಲರು ಹಾಗೂ ಪ್ರಧಾನ ಕಾರ್ಯದರ್ಶಿ ಮಹಾತ್ಮ ಗಆಂಧೀಜಿ ಗ್ರಾಹಕರ ರಕ್ಷಣಾ ವೇದಿಕೆ (ರಿ) ವೈಜನಾಥ ಎಸ್.ಝಳಕಿ, ರಾಯಚೂರು ವಿಶೇಷ ಸನ್ಮಾನ್ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ರಂಗರ್ಮಿಕರು ಜಫರ್ ಮೋಹಿಯುದ್ದನ್, ಅಖಿಲ ಭಾರತೀಯ ಉರ್ದು ಮಂದ ಅಧ್ಯಕ್ಷರಾದ ಸೈಯದ್ ರವೂಪ್ ಖಾದ್ರಿ, ಉಪಸ್ಥಿತರಿವರು.

**ನಾಟಕ 2**: : ಕೆವಡೆ ಕಾ ಬನ್ " ಉರ್ದು ರಚನೆ: ಸುಲೇಮಾನ ಖತೀಬ ರಂಗರೂಪ: ನಯೀಮ್ ಜಾವೇದ್ ನಿರ್ದೇಶನ: ಅಲಿ ಅಹ್ಮದ ತಂಡ: ದರ್ಪಣ: ಸಂಗೀತ ನಿರ್ವಹಣೆ: ಜಸ್ಪಾಲ್ ಮೋನಿ

ಪ್ರಸ್ತುತಿ: ಸುಲೇಮಾನ ಖತೀಮ ಸ್ಮಾರಕ ಶೈಕ್ಷಣಿ ಸಾಂಸ್ಕೃತಿ ಹಾಗೂ ಚಾರಿಟೇಬಲ್ ಕಲಬುರಗಿ

ಡಿಸೆಂಬರ್ 14 ರಂದು ಸಂಜೆ 6 ಗಂಟೆಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಸುನೀಲ್ ಪನ್ವರ್, ಮಹಾನಗರ ಪಾಲಿಕೆ ಆಯುಕ್ತರಾದ ಅವಿನಾಶ ಶಿಂಧೆ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ವಿಜಯಕುಮಾರ ತೇಗಲತಿಪ್ಪಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರು ಸಂಘದ ಅಧ್ಯಕ್ಷ ಬಾಬುರಾವ ಯಡ್ರಾಮಿ, ಹಿರಿಯ ಸಾಹಿತಿಗಳಾದ ಶೀತಲ ದೇವಲಗಾಂವಕರ್, ಹಿರಿಯ ಸಾಹಿತಿಗಳಾದ ಸವೋತ್ತಮ ಸತಾಳ್ಕರ್,

ಅಧ್ಯಕ್ಷತೆ ಕರ್ನಾಟಕ ರಂಗಾಯಣ ನಿರ್ದೇಶಕರಾದ ಡಾ. ಸುಜಾತಾ ಜಂಗಮಶೆಟ್ಟಿ,

**ನಾಟಕ**:–**3**: ಪಾಪಾ ಪೇಟ್ ಕಾ ಸವಾಲ್ ಮರಾಠಿ ರಚನೆ/ನಿರ್ದೇಶನ/ನಟನೆ: ಜಯಂತ ಗಾಡೇಕರ್ ಸಂಗೀತ ಮತ್ತು ಬೆಳಕು: ಆಶಿಶ ಕುಲಕರ್ಣಿ ರಂಗ ಸಜ್ಜಿಕೆ/ ರಂಗ ಪರಿಕರ: ಹರೀಶ ಹರಿಔಧ ವಸ್ತ್ರ ವಿನ್ಯಾಸ ಮತ್ತು ಪ್ರಸಾಧನ: ಡಾ. ಸಂಯುಕ್ತ ಥೋರಾಟ ಪ್ರಸ್ತುತಿ: ಜಿಗ್‌ಶೋ ಕ್ರಿಯೇಷನ್,

**ಸಮಾರೋಪ ಸಮಾರಂಭ:–**

ಸಮಾರಂಭ ಡಿಸೆಂಬರ್ 15 ರಂದು ಸಂಜೆ 6 ಗಂಟೆಗೆ ಸಮಾರೋಪ ನುಡಿ: ಪ್ರಾಧ್ಯಾಪಕರು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕಲಬುರಗಿ ಡಾ. ವಿಕ್ರಮ ವಿಸಾಜಿ, ಜೆಸ್ಕಾಂ ಅಧ್ಯಕ್ಷರು ಮುಖ್ಯ ಅತಿಥಿಗಳಾಗಿ

ಪ್ರವೀಣ ಕುಮಾರ ಪಾಟೀಲ, ಹಿರಿಯ ಸಾಹಿತಿಗಳು ಮೀನಾಕ್ಷಿ ಬಾಳಿ, ವಿಭಾಗೀಯ ಪತ್ತಗಾರ ಕಚೇರಿಯ ಉಪನಿರ್ದೇಶಕರು ಡಾ. ವೀರಶೆಟ್ಟಿ, ಅಧ್ಯಕ್ಷತೆ ಡ.ಸುಜಾತಾ ಜಂಗಮಶೆಟ್ಟಿ, ವಹಿಸುವರು.

# ಹುಲಿಯನ್ನು ಸೆರೆ ಹಿಡಿಯಲು ಮನವಿ



**ಹುಣಸೂರು:** ತಾಲೂಕಿನ ಹನುಗೂಡು ಹೋಬಳಿ ಮುತ್ತುರಾಯನಹೊಸಳ್ಳಿ ಕಾಡಿನಿಂದ ಹೊರಬಂದಿರುವ ಹುಲಿ ಮುತ್ತು ರಾಯನ ಹೊಸಳ್ಳಿ ಹಾಗೂ ಸುತ್ತಲ ಹಳ್ಳಿಗಳಿಗೆ ದಾಳಿಯಿಟ್ಟು ಹಲವು ಜಾನುವಾರುಗಳನ್ನು ತಿಂದುಹಾಕಿದ್ದು, ರಾತ್ರಿ ವೇಳೆ ಹಳ್ಳಿಗಳಲ್ಲಿನ ಜನ ಮನಯಿಂದ ಹೊರಬರಲು ಹೆದರುತ್ತಿದ್ದು, ಜಮೀನುಗಳಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸಲು ಹೋಗಲು ಹಿಂಜ–ರಿಯುತ್ತಿದ್ದಾರೆ. ಅರಣ್ಯ ಇಲಾಖೆಯು ಹುಲಿಯ ಉಪಟಳ ತಪ್ಪಿಸಲು, ಹುಲಿಯನ್ನು ಸೆರೆ ಹಿಡಿದು ಜನರಿಗಾಗುತ್ತಿರುವ ಅನಾನುಕೂಲತೆಯನ್ನು ತಪ್ಪಿಸಬೇಕೆಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ತಾಲೂಕು ಅಧ್ಯಕ್ಷ ವೇಣು ಕುಮಾರ್ ಎಂ ಆರ್ ಹೊಸಳ್ಳಿ ಯವರು ಮುತ್ತು ರಾಯನ ಹೊಸಳ್ಳಿ ಗ್ರಾಮದ ಮುಖಂಡರೊಂದಿಗೆ ಸೇರಿ ಉಪ ಪ್ರಾದೇಶಿಕ ಅರಣ್ಯ ವಿಭಾಗದ ಡಿ ಸಿ ಎಫ್ ಅರಣ್ಯಾಧಿಕಾರಿಗಳಿಗೆ ಮೊಹಮ್ಮದ್ನ ಫಯಾಝುದ್ದೀನ್ ಖಾನ್ ಮನವಿ ಪತ್ರ ಸಲ್ಲಿಸಿದರು.

ನಂತರ ಮನವಿ ಸ್ವೀಕರಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಫೈಯಜ್ ಮಹಮ್ಮದ್ ಖಾನ್ ಮಾತನಾಡಿ, ಹುಲಿ ದಾಳಿಯಿಂದ ಸಂತ್ರಸ್ತ ಹಳ್ಳಿ ಜನರಿಗೆ ನಿರಾತಂಕ ವಾತಾವರಣ ಸೃಷ್ಟಿಸಲು ಅರಣ್ಯ ಇಲಾಖೆ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಂಡಿದೆ. ಸಧ್ಯದಲ್ಲೇ ಹುಲಿಯನ್ನು ಸೆರೆ ಹಿಡಿದು ಕಾಡಿಗೆ ಬಿಡುವ ಕೆಲಸ ಮಾಡುವ ಸಂಪೂರ್ಣ ಭರವಸೆ ನೀಡಿದರು ದಸಂಸ ತಾಲೂಕು ಅಧ್ಯಕ್ಷ ವೇಣುಕುಮಾರ್ ಗ್ರಾಮಸ್ಥರು ಹಾಜರಿದ್ದರು.

# ಶ್ರಮ ಸಂಸ್ಕೃತಿಯ ಮೂಲಕ ಗ್ರಾಮಾಭಿವೃದ್ಧಿ



**ಕೊಪ್ಪಳ:** ತಾಲ್ಲೂಕಿನ ಮೋರನಹಳ್ಳಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ಗ್ರಾಮೀಣ ಅಭಿವೃದ್ಧಿ ಪಂಚಾಯತ ರಾಜ್ಯ ವಿಶ್ವ ವಿದ್ಯಾಲಯ ಗದಗ ವತಿಯಿಂದ ಸಮಾಜ ಕಾರ್ಯ ವಿಭಾಗದ (ಎಂ.ಎಸ್.ಡಬ್ಲ್ಯೂ) ವಿದ್ಯಾರ್ಥಿಗಳಿಂದ ಗ್ರಾಮದ ಕ್ಷೇತ್ರ ಕಾರ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಗ್ರಾಮದ ಮಲಿಯಮ್ಮನ ದೇವಸ್ಥಾನದ ಮುಂಭಾಗದಲ್ಲಿ ವೇದಿಕೆಯಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಭೀಮಮ್ಮ ಶಿಳ್ಳಿಕ್ಯಾತರ ಅವರಿಂದ ತೊಗಲುಗೊಂಬೆಯಾಟದ ರಂಗ ಗೀತೆಗಳು ಮತ್ತು ರಾಮಾಯಣ ಮತ್ತು ಮಹಾ ಭಾರತದ ಕೆಲವು ಆಖ್ಯಾನಗಳನ್ನು ಸಂಭಾಷಣೆ ಹಾಗೂ ಹಾಡಿನೊಂದಿಗೆ ಗಮನಸೆಳೆದರು. ಡಾ.ಲಿಂಗರಾಜ ನಿಡುವಣಿ ಮಾತನಾಡಿ ಮೋರನಹಳ್ಳಿ ಗ್ರಾಮವು ಜಿಲ್ಲೆಯಲ್ಲಿಯೇ ವಿಶೇಷ ಎನಿಸಿಕೊಂಡಿದೆ. ಕುಲುಕಸಬು,ಕಲಾ ಆರಾಧನೆಯ ಮೂಲಕ ಸಮುದಾಯವು ಅಭಿವೃದ್ಧಿಯಾಗುತ್ತಿದೆ.ವಿದ್ಯಾರ್ಥಿಗಳು ಸಮಾಜದೊಂದಿಗೆ ಬೆರೆತು ಕಲಿಕೆಯನ್ನು ಮುಂದುವರೆಸಬೇಕೆಂದರು. ಸಾಹಿತಿ ಬಿ.ಎನ್.ಹೊರಪೇಟಿ ಮಾತನಾಡಿ ಗ್ರಾಮವು ಕೃಷಿ ಪ್ರದಾನವಾಗಿದ್ದು ಶ್ರಮ ಸಂಸ್ಕೃತಿಯ ಮೂಲಕ ಜಿಲ್ಲೆಯಲ್ಲಿ ಮಾದರಿಯಾಗಿದೆ.ಪ್ರತಿ ಮನೆಯಲ್ಲೂ ಕಲಾವಿದರು ಮತ್ತು ಕಲಾ ಆರಾಧನೆ ಇದ್ದು ಶಿಕ್ಷಣದ ಮೂಲಕ ಗ್ರಾಮವು ಆರ್ಥಿಕವಾಗಿ ಮತ್ತು ಅಭಿವೃದ್ಧಿಯತ್ತ ಸಾಗುತ್ತಿದೆ,ವಿದ್ಯಾರ್ಥಿಗಳು ಓದಿನ ಜೊತೆಗೆ ತಮ್ಮಲ್ಲಿರುವ ಕೌಶಲ್ಯಗಳನ್ನು ಬಳಸಿಕೊಂಡು ಸಮಾಜದೊಂದಿಗೆ ಬೆರೆಯುವ ಕಾರ್ಯ ಮಾಡಬೇಕು ಎಂದರು. ಕಾರ್ಯಕ್ರಮದಲ್ಲಿ ಹೆಚ್.ಪಕ್ಕಿರೇಶ,ನಾಗರಾಜ,ಚೇತನ,ಪ್ರದೀಪ್,ಕೊಟ್ರೇಶ್ ಹಾಗೂ ಸಾಮಾಜಿಕ ಕ್ಷೇತ್ರದ ವಿಭಾಗದ ವಿದ್ಯಾರ್ಥಿಗಳು ಇದ್ದರು.

# ಅನಧಿಕೃತ ಮದ್ಯಮಾರಾಟದ ವಿರುದ್ಧ ಸ್ತ್ರೀ ದನಿ



**ಯಲಬುರ್ಗಾ:** ತಾಲೂಕಿನ ತುಮ್ಮರಗುದ್ದಿ ಗ್ರಾಮದಲ್ಲಿ ಶಾಲೆಯ ಮುಂಭಾದಲ್ಲಿ ಹಾಗು ಪಾನ ಬೀಡಾ ಅಂಗಡಿ, ಕಿರಾಣಿ ಅಂಗಡಿ,ಗುಡಿಸಲು ಹಾಗು ಮನೆ ಮನೆಯಲ್ಲಿ ಮದ್ಯ ಮಾರಾಟವಾಗುದನ್ನು ತಡೆಗಟ್ಟುವಲ್ಲಿ ಮಹಿಳೆಯರು ಗ್ರಾಮ ಪಂಚಾಯತಿಗೆ ಮುತ್ತಿಗೆ ಹಾಕಿ, ಪೋಲಿಸ ಇಲಾಖೆಯವರೊಂದಿಗೆ ನೂರಾರು ಮಹಿಳೆಯರು ಸೇರಿ ಅಕ್ರಮ ಮದ್ಯ ಮಾರಾಟ ಮಾಡುವ 26 ವಿವಿಧ ಅಂಗಡಿಗಳನ್ನು ತೋರಿಸಿ ,ಪೋಲಿಸ ಇಲಾಖೆಯವರ ಗಮನ ಸೆಳೆದಿರುವದರಿಂದ ಪರೀಶಿಲನೆ ವೇಳೆಯಲ್ಲಿ ಮಾರಾಟಗಾರರು ಚಾಣಕ್ಷ ಬುದ್ದಿ ಉಪಯೋಗಿಸಿ ಇವರಿಗೆ ಸಿಗಲಾರದಂತೆ ಬೆರೆ ಕಡೆ ಮಾಯ ಮಾಡಿ, ಒಬ್ಬರ ಮನೆಯಲ್ಲಿ ಮಾತ್ರ ಮದ್ಯ ತುಂಬಿರುವ ಬಕೆಟ ಸಿಕ್ಕಿತ್ತು ಆಗ ಯಲಬುರ್ಗಾ ಪಿ.ಎಸ್.ಐ,ಎಎಸ್.ಐ. ಪೋಲಿಸ ಸಿಬ್ಬಂದಿಗಳು ಡಿ. 5 ರಂದು ಪ್ರಕರಣ ದಾಖಲಿಸಿಕೊಂಡಿದ್ದರು, ಈಗ ಮತ್ತೆ ಡಿ.11 ರಂದು ಗ್ರಾಮ ಪಂಚಾಯತಿ ಮುಂಬಾಗದಲ್ಲಿ ಗ್ರಾಮದ ನೂರಾರು ಮಹಿಳೆಯರು ಸುಮ್ಮನೆ ಕುಳಿತು ಕೊಳ್ಳಲಾರದೆ ಸರಾಯಿ ಮದ್ಯ ಮುಕ್ತ ಗ್ರಾಮವನ್ನಾಗಿ ಮಾಡುವಂತೆ ಅಬಕಾರಿ ಇಲಾಖೆ, ಪೋಲಿಸ ಇಲಾಖೆಯವರಲ್ಲಿ ಕರವೆ,ಕನ್ನಡಪರ,ಹಾಗು ವಿವಿಧ ಸಂಘನೆಗಳು ಹಾಗು ಗ್ರಾಮದ ಮುಖಂಡರು ಹೋರಾಟಕ್ಕೆ ಸಾಥ ನೀಡಿ ಅನಧಿಕೃತವಾಗಿ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವಲ್ಲಿ ಅಬಕಾರಿ ಇಲಾಖೆ ವಿಫಲವಾಗಿದೆ ಎಂದು ನೂರಾರು ಮಹಿಳೆಯರು ಹಾಗು ಹಿರಿಯಮುಖಂಡರು ತಮ್ಮ ನೂವಿ ಸಂಗತಿಯ ಅಳಲನ್ನು ತೊಡಿಕೊಂಡರು. ಈ ವೇಳೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕ ಅದ್ಯಕ್ಷ ರಾಜಶೇಖರ ಶ್ಯಾಗೋಟಿ ಅವರು ಮಾತನಾಡಿ, .ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ತುಮ್ಮರಗುದ್ದಿ ಗ್ರಾಮದ ಜನರು ಬೆಸತ್ತು ಹೊಗಿದ್ದಾರೆ ಸಾವು ಬದುಕಿನಲ್ಲಿ ಸಾಲ ಮಾಡಿ ಜೀವನ ಸಾಗಿಸುತ್ತಾರೆ ಇವರ ಕುಟುಂಬದಲ್ಲಿ ಮನಸ್ಸಿಗೆ ನೆಮ್ಮದಿ ಸಿಗಲಾರದೆ ತೊಂದರೆ, ನರಕಯಾತನೆ ಅನುಭವಿಸುತ್ತಿದ್ದಾರೆ ,ಅನಧಿಕೃತ ಅಕ್ರಮ ಮದ್ಯ ಮಾರಾಟ ತಡೆಗಟ್ಟುವಲ್ಲಿ ಸೂಕ್ತ ಕ್ರಮ ತಗೆದುಕೊಂಡು ಸರಾಯಿ ಮುಕ್ತ ಗ್ರಾಮ ಮಾಡಬೇಕು ಎಂದು ಒತ್ತಾಯಿಸಿದರು.ಕುಡಿತ ಚಟಕ್ಕೆ ಸಾಕಷ್ಟು ಕುಟುಂಬ ಬೀದಿ ಪಾಲಾಗಿದೆ ಇನ್ನೂ ಮುಂದೆ ಆ ಪರಿಸ್ಥಿತಿ ಬರಲಾರದಂತೆ ಮಹಿಳೆಯರ ಪರ ನಿಲ್ಲತ್ತವೆ ಎಂದು ಗ್ರಾಮದ ಮುಖಂಡ ಕಳಕನಗೌಡ ಮಾಲಿ ಪಾಟೀಲ ಅವರು ಹೇಳಿದರು.ಹೋರಾಟ ಮಾಡಿದಾಗ ಮೂರು ದಿನ ಅಂಗಡಿ ಬಂದ್ ಮಾಡಿ ಮತ್ತೆ ಪುನಃ ಅಕ್ರಮವಾಗಿ ಮಾರಾಟ ಮಾಡುವದಕ್ಕೆ ಮುಂದಾಗುತ್ತಾರ. ಇದನ್ನು ತಡೆಗಟ್ಟುವಲ್ಲಿ ನಿರಂತರವಾಗಿ ಹೋರಾಟ ಮುಂದುವರಿಯುತ್ತದೆ ಎಂದು ದಲಿತ ಮುಖಂಡ ದುರಗಪ್ಪ ನಡುಲಮನಿ ಹೇಳಿದರು. ಪಿಡಿಓ ರವಿಕುಮಾರ ಲಿಂಗಣ್ಣನವರ,ಶಿವರಾಜ ಚಿಕ್ಕೊಪ್ಪ,ಬಸವರಾಜ ಕಂಬಳಿ ಸೇರಿದಂತೆ ಮಹಿಳೆಯರು ಭಾಗವಹಿಸಿದ್ದರು.

# ಖಾಸಗಿ ಶಾಲಾ, ಕಾಲೇಜಿಗೆ ಅನುದಾನ ಶೀಘ್ರ

• ಮಲ್ಲಮ್ಮ ನುಡಿ ಬೀದರ್

1995 ರಿಂದ 2005ರ ವರೆಗಿನ ಅನುದಾನ ರಹಿತ ಖಾಸಗಿ ಶಾಲಾ, ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸಲು ಸರ್ಕಾರ ಆದಷ್ಟು ಬೇಗ ಕ್ರಮ ಕೈಗೊಳ್ಳಲಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹಾಗೂ ಅರಣ್ಯ ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದರು. ವಿಧಾನಮಂಡಲ ಅಧಿವೇಶನ ನಡೆಯುತ್ತಿರುವ ಬೆಳಗಾವಿಯ ಸುವರ್ಣ ಸೌಧದ ಮುಂಭಾಗದಲ್ಲಿ ಬುಧವಾರ ಧರಣಿ ನಡೆಸಿದ ಅಖಿಲ ಕರ್ನಾಟಕ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ಅವರು ಈ ಆಶ್ವಾಸನೆ ಕೊಟ್ಟರು. ಅನುದಾನ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚೆ ನಡೆಸಲಾಗುವುದು.



ರಾಜ್ಯ ಬಜೆಟ್‌ನಲ್ಲಿ ಇದಕ್ಕಾಗಿ ಅನುದಾನ ತೆಗೆದಿರಿಸಲಾಗುವುದು ಎಂದು ತಿಳಿಸಿದರು. ಶಾಲಾ, ಕಾಲೇಜುಗಳ ಮಾನ್ಯತೆ ನವೀಕರಣ ಪ್ರಕ್ರಿಯೆ ಸರಳೀಕರಿಸುವ ಸಂಬಂಧ ಈಗಾಗಲೇ ತ್ರಿಸದಸ್ಯ ಸಮಿತಿ ರಚಿಸಲಾಗಿದೆ. ಸಮಿತಿ ಅಧ್ಯಯನ ನಡೆಸಿ, ವರದಿ ಸಲ್ಲಿಸಿದ ನಂತರ ಅದರ ಆಧಾರದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಕಲ್ಯಾಣ ಕರ್ನಾಟಕ ಸೇರಿದಂತೆ ಉತ್ತರ ಕರ್ನಾಟಕದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿವೆ. ಫಲಿತಾಂಶ ಹೆಚ್ಚಳದಲ್ಲಿ ಸಂಸ್ಥೆಗಳ ಬೋಧಕ ಸಿಬ್ಬಂದಿ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಸಂಘದ ರಾಜ್ಯ ಅಧ್ಯಕ್ಷ ರೇವಣಸಿದ್ದಪ್ಪ ಜಲಾದೆ ಅವರು 1995ರ ನಂತರದ ಅನುದಾನ ರಹಿತ ಶಾಲಾ, ಕಾಲೇಜುಗಳನ್ನು ಕೂಡಲೇ ಅನುದಾನಕ್ಕೆ ಒಳಪಡಿಸಬೇಕು ಹಾಗೂ ಮಾನ್ಯತೆ ನವೀಕರಣ ಸರಳಗೊಳಿಸಬೇಕು ಎಂದು ಬೇಡಿಕೆ ಮಂಡಿಸಿದರು. ಸಚಿವ ಈಶ್ವರ ಖಂಡ್ರೆ ಅವರು ಖಾಸಗಿ ಶಿಕ್ಷಣ ಸಂಸ್ಥೆಗಳ ಬೇಡಿಕೆ ಈಡೇರಿಸುವ ದಿಸೆಯಲ್ಲಿ ವಿಶೇಷ ಮುತುವರ್ಜಿ ವಹಿಸಿರುವುದು ಸಂತಸ ಉಂಟು ಮಾಡಿದೆ.

ಸಚಿವದ್ವಯರ ಭರವಸೆಯಿಂದ ಶೀಘ್ರವೇ ಅನುದಾನಕ್ಕೆ ಒಳಪಡಿಸುವ ಹಾಗೂ ಮಾನ್ಯತೆ ಸರಳೀಕರಿಸುವ ಪ್ರಮುಖ ಬೇಡಿಕೆಗಳು ಈಡೇರುವ ಆಶಾಭಾವ ಮೂಡಿದೆ ಎಂದು ತಿಳಿಸಿದರು. ಬೃಹತ್ ಧರಣಿಯಲ್ಲಿ ರಾಜ್ಯದ ಮೂಲೆ, ಮೂಲೆಗಳಿಂದ ಖಾಸಗಿ ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಹೇಳಿದರು. ವಿಧಾನ ಪರಿಷತ್ ಸದಸ್ಯರಾದ ಶಶೀಲ್ ನಮೋಶಿ, ಪುಟ್ಟಣ್ಣ, ಸಂಕನೂರ, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚಿಂಗಲೆ ಲಕ್ಷ್ಮಣರಾವ್, ಎಸ್.ಎಸ್. ಮಠ, ಜೆ.ಸಿ. ಶಿವಪ್ಪ, ಸಂಘದ ರಾಜ್ಯ ಗೌರವಾಧ್ಯಕ್ಷ ಮಲ್ಲಿಕಾರ್ಜುನ ಲೋನಿ, ಉಪಾಧ್ಯಕ್ಷರಾದ ಎಂ. ಮೌಲಾಲಿ, ಡಿ.ಬಿ. ನದಾಫ್, ಕಾರ್ಯದರ್ಶಿ ಕೆ. ಗುರುನಾಥ ರೆಡ್ಡಿ, ಸಹ ಕಾರ್ಯದರ್ಶಿ ಅನಿಲ್ ಜಾಧವ್ ಮತ್ತಿತರರು ಇದ್ದರು.

# ಸ್ವಾಮಿ ಅಯ್ಯಪ್ಪ ಮಾಲಧಾರಿಗಳಿಂದ ಭಜನೆ



• ಮಲ್ಲಮ್ಮ ನುಡಿ ಮುದಗಲ್

ಕೋಟೆ ಒಳಭಾಗದಲ್ಲಿರುವ ಐತಿಹಾಸಿಕ ಶ್ರೀ ಕಾಳಿಕಾ ದೇವಿ ದೇವಸ್ಥಾನದಲ್ಲಿ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳಿಂದ ಭಜನೆ ಕಾರ್ಯಕ್ರಮ ಬುಧವಾರ ರಾತ್ರಿ ಜರುಗಿತು.

ದೇವಸ್ಥಾನದಲ್ಲಿ ಕಾಳಿಕಾ ದೇವಿಗೆ ಧಾರ್ಮಿಕ ಪದ್ಧತಿಯಂತೆ ದೇವಿಗೆ ಗಂಧದ ಅಭಿಷೇಕ ಕುಂಕುಮಾರ್ಚನೆ, ಉಡಿ ತುಂಬುವದು ಸೇರಿದಂತೆ ದೇವಿಗೆ ಕಾಳಪ್ಪ ಬಡಿಗೇರ ನೇತೃತ್ವದಲ್ಲಿ ಪೂಜೆ ಸಲ್ಲಿಸಲಾಯಿತು. ಸ್ಥಳೀಯ ಅಯ್ಯಪ್ಪ ಮಾಲಾಧಾರಿಗಳಿಂದ ಕಾಳಿಕಾ ದೇವಿಗೆ ವಿಶೇಷ ಪೂಜೆ ಸಲ್ಲಿಸಿ, ಗುರುಸ್ವಾಮಿ ಅಮರೇಶ ನೇತೃತ್ವದಲ್ಲಿ ಭಜನೆ ಕಾರ್ಯಕ್ರಮ ನೆರವೇರಿಸಿದರು. ಸಕಲ ಅಯ್ಯಪ್ಪ ಮಾಲಾಧಾರಿಗಳು ಸೇರಿದಂತೆ ಕಾಳಿಕಾ ದೇವಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಶ್ರೀಧರ ಪತ್ತಾರ, ವಿಶ್ವಕರ್ಮ ಸಮುದಾಯದ ಮುಖಂಡರಾದ ಉದಯ ಕುಮಾರ ಕಮ್ಮಾರ, ಡಾ. ರಮೇಶ ಪತ್ತಾರ, ಕಾಂತಕುಮಾರ ಪತ್ತಾರ, ಮೌನೇಶ ಕಮ್ಮಾರ, ಚಿನ್ನಪ್ಪ ಪತ್ತಾರ, ಮೌನೇಶ ಪತ್ತಾರ, ಸಂಪತ್ ಪತ್ತಾರ, ಕಾಶೀಪತಿ ಪತ್ತಾರ, ಸೋಮನಾಥ್ ಪತ್ತಾರ, ಸುಮಿತ್ರಾ, ಲಕ್ಷ್ಮೀದೇವಿ, ಶಿಲ್ಪಾ, ಸುಮಾ, ಪುಷ್ಪವತಿ, ಅರುಣಾ, ಶಶಿಕಲಾ, ರೇಣುಕಾ ಸೇರಿದಂತೆ ಇತರರಿದ್ದರು.

# ಪುಣ್ಯಸ್ಮರಣೆ: 13 ರಿಂದ ಸಂಗೀತ ಸಮ್ಮೇಳನ

• ಮಲ್ಲಮ್ಮ ನುಡಿ ರಾಯಚೂರು

ಡಿ.11–ಡಾ.ಪಂ. ಪುಟ್ಟರಾಜ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಡಾ.ಪಂ ಪುಟ್ಟರಾಜ ಕವಿ ಗವಾಯಿಗಳವರ 15ನೇಯ ಪುಣ್ಯಸ್ಮರಣೆಯ ಅಂಗವಾಗಿ ಡಿ.13 ಮತ್ತು 14 ರಂದು ನಗರದ ಸೋಮವಾರ ಹಿರೇಮಠದಲ್ಲಿ ಎರಡು ದಿನ ಕಾಲ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಕಲಾವಿದರಿಂದ ಸಂಗೀತ ಸಮ್ಮೇಳನ ಕಾರ್ಯಕ್ರಮ ನಡೆಯಲಿದೆ ಎಂದು ಎ ಎಸ್ ರಘು ಕುಮಾರ ಅವರು ಹೇಳಿದರು.

ಅವರಿಂದು ನಗರದ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಸ್ಥಳೀಯ ಕಲಾವಿದರಿಂದ ಸಂಗೀತ ಸೇವೆ ನಡೆಯಲಿದೆ ಎಂದರು.

ಅಭಿನವ ರಾಚೋಟಿ ಶಿವಾಚಾರ್ಯ ಮಹಾಸ್ವಾಮಿಗಳು ಕಾರ್ಯಕ್ರಮದ ದಿವ್ಯಾ ಸನ್ನಿದ್ಯಾ ವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ವೀರಸಂಗಮೇಶ್ವರ ಮಹಾಸ್ವಾಮಿಗಳು ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಚಿವ ಎನ್ ಎಸ್ ಬೋಸರಾಜು ಆಗಮಿಸಲಿದ್ದಾರೆ ಎಂದರು.




ಶಾಸಕ ಬಸನಗೌಡ ದದ್ದಲ್ ಆಗಮಿಸಲಿದ್ದಾರೆ. ಸಂಸದ ಜಿ. ಕುಮಾರ ನಾಯಕ, ಬಸವರಾಜ ಪಾಟೀಲ್ ಇಟಗಿ, ಎನ್ ಗಿರಿಜಾ ಶಂಕರ, ಶ್ರೀನಿವಾಸ್ ರೆಡ್ಡಿ, ಪಿ. ವೆಂಕಟೇಶರೆಡ್ಡಿ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಎರಡನೇ ದಿನದ ಕಾರ್ಯಕ್ರಮದಲ್ಲಿ ನಗರ ಶಾಸಕ ಡಾ. ಶಿವರಾಜ ಪಾಟೀಲ್ ಆಗಮಿಸಲಿದ್ದಾರೆ.

ಈ ಸಂದರ್ಭದಲ್ಲಿ ಈರಣ್ಣ ಹೂಗಾರ ಜಾಲಿಬೆಂಚಿ, ಚೆನ್ನಯ್ಯಸ್ವಾಮಿ, ಪಿ. ಚೇತನ್ ಕುಮಾರ, ಅಯ್ಯಪ್ಪ ಸ್ವಾಮಿ ಸೇರಿದಂತೆ ಉಪಸ್ಥಿತರಿದ್ದರು.

# ‘ಬಂಧಮುಕ್ತ’ ಚಲನಚಿತ್ರದ ಟ್ರೈಲರ್ ಬಿಡುಗಡೆ

• ಮಲ್ಲಮ್ಮ ನುಡಿ ಹುಬ್ಬಳ್ಳಿ

ಸಮರ್ಥ ಫಿಲ್ಮ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾದ ಪತ್ರಕರ್ತ, ಲೇಖಕ ಕುಮಾರ ಬೇಂದ್ರೆ ನಿರ್ದೇಶನದ ‘ಬಂಧಮುಕ್ತ’ ಚಲನಚಿತ್ರದ ಟ್ರೈಲರ್‌ಅನ್ನು ಹಿರಿಯ ನಿರ್ದೇಶಕ ಪದ್ಮಶ್ರೀ ಗಿರೀಶ್ ಕಾಸರವಳ್ಳಿ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು ಸಮಾಜಕ್ಕೆ ಉತ್ತಮ ಹಾಗೂ ಆರೋಗ್ಯಪೂರ್ಣ ಸಂದೇಶ ನೀಡುವಂತಹ ಚಲನಚಿತ್ರವನ್ನು ಕುಮಾರ ಬೇಂದ್ರೆ ನಿರ್ದೇಶನ ಮಾಡಿದ್ದಾರೆ. ಪುರುಷನ ದಬ್ಬಾಳಿಕೆ ಮತ್ತು ಸಂಕೋಲೆಗಳ ವಿರುದ್ಧ ದಿಟ್ಟ ಯುವತಿಯೊಬ್ಬಳು ಹೋರಾಟ ಮಾಡಿ, ತನ್ನ ಬದುಕನ್ನು ಸಂಕೋಲೆಯಿಂದ ಮುಕ್ತಗೊಳಿಸುವ ಈ ಚಿತ್ರದ ಕಥೆಯು ಸಮಾಜಕ್ಕೆ ಮಾದರಿ ಆಗಬಲ್ಲದು ಎಂದರು. ಚಿತ್ರದ ನಿರ್ಮಾಪಕ ಶಿವಪುತ್ರಪ್ಪ ಆರ್. ಆಶಿ ಅವರು ಗಿರೀಶ್ ಕಾಸರವಳ್ಳಿ ಅವರನ್ನು ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕ ಕುಮಾರ ಬೇಂದ್ರೆ, ಚಿತ್ರದ ಕಲಾವಿದರಾದ ಐಶ್ವರ್ಯ ನಾಗರಾಜ, ರಿತಿಕಾ ಯಲ್ಲಪ್ಪ, ಮಂಜುನಾಥಗೌಡ ಪಾಟೀಲ, ಸನತ್ ಹಾಗೂ ಚಿತ್ರದ ತಂತ್ರಜ್ಞರು ಉಪಸ್ಥಿತರಿದ್ದರು. ಬಿಡುಗಡೆಯ ನಂತರ ‘ಬಂಧಮುಕ್ತ’ ಚಿತ್ರದ ಟ್ರೈಲರ್ ಪ್ರದರ್ಶಿಸಲಾಯಿತು.




ಹುಬ್ಬಳ್ಳಿ ಧಾರವಾಡ ಮತ್ತು ಉತ್ತರ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಚಿತ್ರೀಕರಿಸಲಾಗಿದ್ದು, 2026ರ ಫೆಬ್ರವರಿಯಲ್ಲಿ ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಗೊಳ್ಳಲಿದೆ ಎಂದು ನಿರ್ದೇಶಕ ಕುಮಾರ ಬೇಂದ್ರೆ ತಿಳಿಸಿದರು. ಪ್ರಮುಖ ಪಾತ್ರಗಳಲ್ಲಿ ‘ಯಜಮಾನ’ ಧಾರಾವಾಹಿ ಖ್ಯಾತಿಯ ಐಶ್ವರ್ಯ ನಾಗರಾಜ್ ಮತ್ತು ಈಗಾಗಲೇ ಹಲವು ಚಿತ್ರಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ ಸನತ್ ಎಸ್. ಅಭಿನಯಿಸಿದ್ದಾರೆ.

ಇತರ ಪಾತ್ರಗಳಲ್ಲಿ ಉತ್ತರ ಕರ್ನಾಟಕದ ಕಲಾವಿದರಾದ ರಿತಿಕಾ ಯಲ್ಲಪ್ಪ,ಮಂಜುನಾಥ ಪಾಟೀಲ, ಅಕ್ಷತಾ ಕಮ್ಮಾರ, ಸಂತೋಷ ಬೆಂಗೇರಿ, ಪ್ರೇಮಾ ನಡುವಿನಮನಿ, ಶಾಂತಾ ಆಚಾರ್ಯ, ಡಾ. ಶಿವ ಮುಲ್ಕಿಪಾಟೀಲ, ಆನಂದ ಮಂಟೂರ, ವಿನಯ ದಂಡಗಿ, ಗೌತಮ ತಾಂಬೆ ಅಭಿನಯಿಸಿದ್ದಾರೆ. ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ವಿಘ್ನೇಶ್ ಮಲಚಮಿ, ಕಥೆ ಶಿವಪುತ್ರಪ್ಪ ಆರ್. ಆಶಿ, ಸಂಕಲನ ಸತ್ಯಜಿತ್, ಎಫೆಕ್ಟ್ ಮತ್ತು ಶಬ್ದ ವಿನ್ಯಾಸ ಶ್ರೀರಾಮ್, ಹಿನ್ನೆಲೆ ಸಂಗೀತ ಬಹುರೂಪಿ, ಗೀತರಚನೆ ಶಿವಪುತ್ರಪ್ಪ ಆಶಿ, ಕುಮಾರ ಬೇಂದ್ರೆ , ಸಂಗೀತ ಡಾ. ಸಿದ್ದೇಶ್ವರ ಕಟಕೋಳ, ಗಾಯಕಿ ರಾಧಿಕಾ ಕುಲಕರ್ಣಿ, ವಸ್ತ್ರಾಲಂಕಾರ ರಾಜೇಶ್, ಶೀರ್ಷಿಕೆ ಮತ್ತು ಪ್ರಚಾರ ವಿನ್ಯಾಸ ಪ್ರಕೃತಿ ಕ್ರಿಯೇಷನ್, ಪತ್ರಿಕಾ ಸಂಪರ್ಕ ಡಾ. ಪ್ರಭು ಗಂಜಿಹಾಳ, ಡಾ. ವೀರೇಶ ಹಂಡಿಗಿ ನಿರ್ವಹಿಸಿದ್ದಾರೆ. ಸಹಾಯಕ ನಿರ್ದೇಶನ ಚೇತನ್, ಚಿತ್ರಕಥೆ–ಸಂಭಾಷಣೆ– ಜೊತೆಗೆ ನಿರ್ದೇಶನವನ್ನು ಕುಮಾರ ಬೇಂದ್ರೆ ಮಾಡಿದ್ದಾರೆ. ನಿರ್ಮಾಣ ಶಿವಪುತ್ರಪ್ಪ ಆರ್. ಆಶಿ, ಸಹ ನಿರ್ಮಾಪಕರು ರಾಜೀವ ಎಸ್. ಆಶಿ, ವಿನಯ ಎಸ್. ಆಶಿ ಆಗಿದ್ದಾರೆ.

# ಅಂತಾರಾಷ್ಟ್ರೀಯ ವಾಣಿಜ್ಯ ಮೇಳ

• ಮಲ್ಲಮ್ಮ ನುಡಿ ಯಾದಗಿರಿ

ಡಿಸೆಂಬರ್ 11, (ಕ.ವಾ): “ಅಂತರಾಷ್ಟ್ರೀಯ ವಾಣಿಜ್ಯ ಮೇಳ–2026”ರ ಜಿಲ್ಲಾ ಮಟ್ಟದ “ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯ” ವಿಜೇತರನ್ನು ಪ್ರಕಟಿಸಿದೆ ಎಂದು ಯಾದಗಿರಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ಹೇಳಿದರು.

ನಗರದ ಜಂಟಿ ಕೃಷಿ ನಿರ್ದೇಶಕರ ಸಭಾಂಗಣದಲ್ಲಿ ಡಿ.9 ರಂದು “ಅಂತರಾಷ್ಟ್ರೀಯ ವಾಣಿಜ್ಯ ಮೇಳ 2026”ರ ಅಂಗವಾಗಿ ಸಿರಿಧಾನ್ಯಗಳ ಮಹತ್ವ &ಚಿಟಿ ಆಹಾರ ಪದ್ಧತಿಗಳಲ್ಲಿ ಸಿರಿಧಾನ್ಯಗಳ ಬಳಕೆ ಉತ್ತೇಜಿಸಲು ಸಿರಿಧಾನ್ಯ ಬಳಸಿ, ಆರೋಗ್ಯ ಉಳಿಸಿ ಎಂಬ ಧ್ಯೇಯ ವಾಕ್ಯದೊಂದಿಗೆ ಜಿಲ್ಲಾ ಮಟ್ಟದ “ಸಿರಿಧಾನ್ಯ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ”ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಗ್ರಾಮಗಳಿಂದ ಒಟ್ಟು 34 ಸ್ಪರ್ಧಾಳುಗಳು ಭಾಗವಹಿಸಿ, ಹೆಚ್ಚು ರಾಸಾಯನಿಕ ಬಳಸುವುದರಿಂದ ಅನಾರೋಗ್ಯ ಉಂಟಾಗುತ್ತದೆ. ಮಹಿಳೆಯರಾದ ತಾವು ದಿನನಿತ್ಯದ ಆಹಾರ ಪದ್ಧತಿಯಲ್ಲಿ ಸಿರಿಧಾನ್ಯಗಳನ್ನು ಬಳಸಿ ಆರೋಗ್ಯವಂತರಾಗಿರಿ ಎಂದು ಉಪದೇಶ ನೀಡಿದರು.



ತೀರ್ಪುಗಾರರ ಅಂತಿಮ ತೀರ್ಪಿನ ಮೇರೆಗೆ ಖಾರಾ ಖಾದ್ಯಗಳಲ್ಲಿ ಯಾದಗಿರಿ ಶ್ರೀಮತಿ. ಮನ್‌ಪ್ರೀತ್ (ನವಣೆ ಟಿಕ್ಕಿ ಪ್ರಥಮ), ಸೈದಾಪೂರ ಶ್ರೀಮತಿ ಅರ್ಚನಾ. ಪಿ.ಸುರೇಶ, (ರಾಗಿಡೋಕ್ಲಾ ದ್ವಿತೀಯ), ಯಡಳ್ಳಿ ಶ್ರೀಮತಿ. ವಿಮಲಾ ಗಂಡ ಅರ್ಜುನ ಹೊಸಮನಿ (ನವಣೆ ಕಿಚಡಿ ತೃತೀಯ) ಸ್ಥಾನವನ್ನು ಪಡೆದಿರುತ್ತಾರೆ.

ಸಿಹಿ ಖಾದ್ಯಗಳಲ್ಲಿ ಯಾದಗಿರಿ ಶ್ರೀಮತಿ ನಿರೂಪ ಎಸ್ ಪಾಟೀಲ್ (ರಾಗಿ ಸ್ಮೂದಿ ಪ್ರಥಮ), ಹತ್ತಿಗೂಡುರು ಶೋಭಾ (ರಾಗಿ ಜಾಮೂನ್ ದ್ವಿತೀಯ), ಸುರುಪುರ ಶ್ರೀಮತಿ. ಸರೋಜನಿ ಗಂಡ ಗುರುಲಿಂಗಪ್ಪ (ನವಣೆ ಪಾಯಸ ತೃತೀಯ) ಸ್ಥಾನವನ್ನು ಪಡೆದಿರುತ್ತಾರೆ.

ಮರೆತು ಹೋದ ಖಾದ್ಯಗಳಲ್ಲಿ ಮೈಲಾಪೂರ ಶ್ರೀಮತಿ. ಶರಣಮ್ಮ ಗಂಡ ಶರಣಪ್ಪ (ಜೋಳದ ಮುಟ್ಟಗಿ ಪ್ರಥಮ), ಐಕೂರ ರೇಷ್ಮ ತಂದೆ ಚಾಂದ್ ಪಾಷಾ (ಸಜ್ಜೆ ಕಡಬು–ದ್ವಿತೀಯ), ಹತ್ತಿಗೂಡುರು ಶ್ರೀಮತಿ. ಗಂಗಮ್ಮ, (ಸಿರಿಧಾನ್ಯ ತಂಬಿಟ್ಟು ತೃತೀಯ) ಸ್ಥಾನವನ್ನು ಪಡೆದಿರುತ್ತಾರೆ.

ಸ್ಪರ್ಧೆಯ ವಿಜೇತರಿಗೆ ಕೃಷಿ ಇಲಾಖೆಯು ಪ್ರಥಮ ಸ್ಥಾನ ಪಡೆದವರಿಗೆ ರೂ. 5,000 ದ್ವಿತಿಯ ಸ್ಥಾನ ಪಡೆದವರಿಗೆ 3,000 ರೂ.ಗಳ ತೃತಿಯ ಸ್ಥಾನ ಪಡೆದವರಿಗೆ 2,000 ರೂ.ಗಳ ನಗದು ಬಹುಮಾನ ನೀಡಿ ಪ್ರೋತ್ಸಾಹಿಸುತ್ತಿದೆ.

ಈ ಸ್ಪರ್ಧೆಯ ತೀರ್ಪುಗಾರರಾಗಿ ಕವಡಿಮಟ್ಟಿ ಕೃಷಿ ವಿಜ್ಞಾನ ಕೇಂದ್ರ ಖಅಂಖ ಮುಖ್ಯಸ್ಥರು ಡಾ.ಜಯಪ್ರಕಾಶ ನಾರಾಯಣ, ಯಾದಗಿರಿ ತೆ–ೂಟಗಾರಿಕೆ ವಿಸ್ತಿರಣಾ ಘಟಕ ಸಹಾಯಕ ಪ್ರಾಧ್ಯಾಪಕರು ಡಾ.ಶಶಿಕಲಾ ರೂಳಿ, ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯ (ಗೃಹ ವಿಜ್ಞಾನ) ಸಹಾಯಕ ಪ್ರಾಧ್ಯಾಪಕರು ಶ್ರೀಮತಿ ಸ್ನೇಹಲ್, ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)